† ಶ್ರೀ ಅನಿವಾಳ ಎ, ನಂಜಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸಚಿವರು ಈಗಾಗಲೇ ವಿಷದೀಕರಿಸಿದ ಪ್ರಕಾರ ನನ್ನ ವಿಶೇಷವಾದ ಒಂದು ಪ್ರಾರ್ಥನೆ ಏನೆಂದರೆ ಸುಮಾರು ಒಂದೂವರೆ ಲಕ್ಷ, ಎರಡು ಲಕ್ಷ, ಎರಡೂವರೆ ಲಕ್ಷ ಜನಸಂಖ್ಯೆ ಇರತಕ್ಕ ತಾಲೋಕ್ ಕೇಂದ್ರಗಳಲ್ಲಿ ಈ ಹಾಸ್ಟಲುಗಳನ್ನು ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಹೆಚ್ಚು ಹೆಚ್ಚು ಜನಸಂಖ್ಯೆ ಇರತಕ್ಕ ತಾಲೋಕುಗಳನ್ನು ತೆಗೆದುಕೊಂಡು ಅಲ್ಲಿ ಈ ಯೋಜನೆ ಸರ್ಕಾರ ಕೈಗೊಳ್ಳಬೇಕು. ಮತ್ತೆ ಕೆಲವು ವಿದ್ಯಾರ್ಥಿ ನಿಲಯಗಳಲ್ಲಿ ಇತರರನ್ನು ಸೇರಿಸಿಕೊಳ್ಳದೇ ತೊಂದರೆ ಕೊಡುತ್ತಿದ್ದಾರೆ, ಇಂತಹ ಸಂದರ್ಭದಲ್ಲಿ ಆ ಹಾಸ್ಟಲುಗಳಿಗೆ ಗ್ರ್ಯಾಂಟ್ಸ್ ಕೊಡುವುದನ್ನು ನಿಲ್ಲಿಸಬೇಕು. ಗ್ರ್ಯಾಂಟ್ಸ್ ಕೊಟ್ಟರು ಕೂಡ ಕಡ್ಡಾಯವಾಗಿ ವಿದ್ಯಾರ್ಥಿಗಳನ್ನು ಹಾಸ್ಟಲುಗಳಲ್ಲಿ ಸೇರಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈಗ ಸರ್ಕಾರ ಈ ಒಂದು ಯೋಜನೆಯನ್ನು ತಾಲೋಕ್ ಕೇಂದ್ರದಲ್ಲಿ ಕ್ರಮೇಣ ಜಾರಿಗೆ ತರುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಆದುದರಿಂದ ಅದರಲ್ಲಿ ನಂಬಿಕೆ ಇಟ್ಟುಕೊಂಡು, ಹೆಚ್ಚು ಜನಭರಿತ ಇರತಕ್ಕ, ಎರಡೂವರೆ ಲಕ್ಷ ಜನರು ಇರತಕ್ಕ ಸ್ಥಳದಲ್ಲಿ ಈ ಒಂದು ಯೋಜನೆಯನ್ನು ಹಾಕಿಕೊಳ್ಳುತ್ತಾರೆ ಎಂಬ ನಂಬಿಕೆಯನ್ನು ಇಟ್ಟುಕೊಂಡು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

MADAM SPEAKER —Is it the pleasure of the House that leave be g.anted to withdraw the resolut.on"?

Hon'ble Members.—Yes.

The Resolution was, by Leave, withdrawn

(ii) re: Introducing total Prohibition in the State.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಟ್ಟಿದ್ದಾರೆ.—

MADAM SPEAKER.—Motion moved.

that this Assembly is of the opinion that total Prohibition be Introduced in the State.

† ಶ್ರೀ ಕೆ. ಪ್ರಭಾಕರ್.—ಅಧ್ಯಕ್ಷರೇ, ಈ ಪಾನ ನಿರೋಧ ವಿಚಾರದಲ್ಲಿ ಅನೇಕ ಸಲ ಈ ಸಭೆಯಲ್ಲಿ ನಾನಾ ರೀತಿಯಲ್ಲಿ ಚರ್ಚೆಗಳು ನಡೆದಿವೆ. ಪ್ರಶ್ನಾವಳಿ ಮುಖಾಂತರ, ಅಲ್ಪಾವಧಿ ಕಾಲದ ಪ್ರಶ್ನೆ ಮುಖಾಂತರ ಚರ್ಚೆ ನಡೆದು ಸರ್ಕಾರದವರು ಸ್ವಲ್ಪ ಮಟ್ಟಿಗೆ ಒಂದೇ ವಿಧವಾದ ನಿಲುವು ಮತ್ತು ಉತ್ತರವನ್ನು ಕೊಡುತ್ತಾ ಬಂದಿದ್ದಾರೆ. ಇವೊತ್ತು ಬಡವರು, ದೀನದಲಿತರು, ಕುಡಿತಕ್ಕೆ ಈಡಾಗಿ ವಿನಾಶವಾಗಿದ್ದಾರೆ, ಸಾಮಾಜಿಕವಾಗಿ ಜನರು ನರಳಾಡುತ್ತಾ ಇರತಕ್ಕದ್ದು ನಿರ್ವಿವಾದ ವಿಚಾರ. ಇಷ್ಟಾದರೂ ಕೂಡ, ಸರ್ಕಾರ ಕೊಡತಕ್ಕ ಉತ್ತರದಲ್ಲಿ ಪಾನ ನಿರೋಧ ಜಾರಿಗೆ ತರತಕ್ಕ ಬಗ್ಗೆ ಒಪ್ಪಿದರೂ ಕೂಡ ರಾಜಭಾರ ನಡೆಸುವುದಕ್ಕೂ, ಹಾಗೂ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೂ ಎಷ್ಟು ಹಣ ದೇಶದಲ್ಲಿ ಬೇಕಾಗುತ್ತದೆ; ಅಷ್ಟು ಹಣ ಹೊಂಚಿಕೊಳ್ಳುವುದು ಕಷ್ಟವಾಗಬಹುದು ಎಂದು ಈ ಒಂದು ಧೋರಣೆಯಿಂದ ಹೇಳುತ್ತಾರೆ.

ಆದರೆ ಈ ಒಂದು ಪ್ರಗತಿಪರವಾದ ಯೋಜನೆಗಳಿಂದ ದೇಶಕ್ಕೆ ಹಾಗೂ ಬಡವರಿಗೆ ಏನೊಂದು ಸಹಾಯವಾಗಿ ಅವರ ಕಲ್ಯಾಣ ಸಾಧನೆಯಾಗುತ್ತದೋ ಅವರು ಈ ಬಗ್ಗೆ ಏನು ನಂಬಿದ್ದಾರೋ ಅದೆಲ್ಲಕ್ಕಿಂತಲೂ ಜಾಸ್ತಿಯಾಗಿ ಈ ಕುಡಿತದ ಹಾವಳಿಯಿಂದ ಆಗತಕ್ಕಂಥಾ ಹಾನಿ ಜಾಸ್ತಿಯಾಗುತ್ತದೆ ಎಂದು ನಾವು ನಿರ್ವಿವಾದವಾಗಿ ಒಪ್ಪಬೇಕಾಗಿದೆ. ಈ ಒಂದು ಬಾಧೆಯಿಂದ ಸರ್ಕಾರಕ್ಕೆ ಸುಮಾರು ೫೦ ಕೋಟಿ ರೂಪಾಯಿ ವರಮಾನ ಬರುತ್ತದೆ ಎಂದು ಅವರು ಹೇಳುತ್ತಿದ್ದಾರೆ ಮತ್ತು ಯಾರಾದರೂ ಇದನ್ನು ಕೊಟ್ಟರೆ ಮತ್ತು ಇದನ್ನು ಜಾರಿಗೆ ತರಬೇಕು ಎನ್ನುವ ಆಸೆ ನಮಗೂ ಇದೆ ಎಂದು ಸರ್ಕಾರದವರು ಉತ್ತರ ಹೇಳುವ ಕಾಲದಲ್ಲಿ ಈ ರೀತಿ ಹೇಳುವುದು ಉಂಟು. ಆದರೆ ಈ ವಾದವನ್ನು ಸಂಪೂರ್ಣವಾಗಿ ತಿಳುವಳಿಕೆ ಉಳ್ಳಂಥಾವರು, ಈ ಕುಡಿತದಿಂದ ಉಂಟಾಗತಕ್ಕಂಥಾ ಹಾನಿ ಏನು ಇದೆ ಎಂದು ತಿಳಿದುಕೊಂಡಂಥಾವರು ಇದನ್ನು ಒಪ್ಪುವುದಿಲ್ಲ. ಈಹೊತ್ತು ಸರ್ಕಾರಕ್ಕೆ ಸುಮಾರು ೪೦೦–೫೦೦ ಕೋಟಿ

ರೂಪಾಯಿ ವರಮಾನ ಇದೆ. ಈ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ಕೆಲಸಗಳನ್ನು ಕಾರ್ಯಗತ ಮಾಡುತ್ತಿದ್ದಾರೆ ಅದರಲ್ಲಿ ಯಾವುದಾದರೂ ಒಂದೆರಡು ಬಾಬಿನಲ್ಲಿರುವ ಯೋಜನೆಗಳನ್ನು ಕೈಬಿಟ್ಟರೂ ಚಿಂತೆ ಇಲ್ಲ ಎಂದು ನಾನು ಹೇಳುತ್ತೇನೆ. ಹಾಗೂ ಈ ಯೋಜನೆಯನ್ನು ಕೈಬಿಡುವುದರ ಜೊತೆಗೆ ಹೊಸದಾಗಿ ಕಂದಾಯ ಹಾಕುವುದಕ್ಕೆ ಮನಸ್ಸು ಮಾಡಿ ಪ್ರಜೆಗಳನ್ನು ಕೇಳಿದರೆ ಈ ಒಳ್ಳೆಯ ಕೆಲಸಕ್ಕೆ ಧನ ಸಹಾಯ ಕೊಡುವುದಿಲ್ಲ ಯಾ ಪ್ರಜೆಯೂ ಹೇಳುವುದಿಲ್ಲ. ಇಷ್ಟಿದ್ದರೂ ಕೂಡ ಇದರಿಂದ ಬರತಕ್ಕಂಥಾ ವರಮಾನಕ್ಕೆ ತೊಂದರೆಯಾಗುತ್ತದೆ ಅಂತ ಹೇಳಿ ಇದನ್ನು ಮುಂದುವರಿಸಿಕೊಂಡು ಬಂದಿರತಕ್ಕಂಥಾದ್ದು ಸರಿಯಲ್ಲ ಎಂದು ಹೇಳುತ್ತೇನೆ ಸರ್ಕಾರ ನಡೆಸತಕ್ಕಂಥಾವರು ಬಡವರ ಮೇಲೆ ದೀನದಲಿತರ ಮೇಲೆ ಬಹಳ ಆಸೆ ಎಂದು ಹೇಳುವಾಗ ಇದನ್ನು ಅಷ್ಟು ಸೀರಿಯಸ್ ಆಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಏತಕ್ಕೆ ದೊಡ್ಡ ಮನಸ್ಸು ಮಾಡಿಲ್ಲ ಎಂದು ನನ್ನ ಭಾವನೆ. ಈ ಬಾಬಿನಲ್ಲಿ ಕೊರತೆಯಾಗತಕ್ಕಂಥಾ ೫೦ ಕೋಟಿ ರೂಪಾಯಿಯನ್ನು ಹೊಂಚುವುದಕ್ಕೆ ಸರ್ಕಾರಕ್ಕೆ ಕಷ್ಟವೇನೂ ಆಗಲಾರದು ಎಂದು ನನ್ನ ಭಾವನೆ. ಹಿಂದೆ ಪಾನನಿರೋಧವನ್ನು ಜಾರಿಗೆ ತಂದಾಗ್ಗೆ ಆಗ ಇದ್ದಂಥಾ ಮಾನ್ಯ ರಾಜಗೋಪಾಲ ಚಾರಿಯವರು ಈ ಒಂದು ವ್ಯಾಪಾರದ ತೆರಿಗೆ ಹಾಕಿ ಆ ಮುಖಾಂತರ ಬರತಕ್ಕಂಥಾ ಹಣವನ್ನು ಇದಕ್ಕೆ ಸರಿದೂಗಿಸಿಕೊಳ್ಳಬಹುದು ಎಂದು ಒಂದು ಸೂಚನೆ ಕೊಟ್ಟರು ಅದರ ಪ್ರಕಾರ ಅವರು ನಡೆಸಿದರು. ಆದರೆ ಈಪೊತ್ತಿನ ಇಂತಹ ಒಳ್ಳೆಯ ಕಾರ್ಯ ಮಾಡುವುದಕ್ಕೆ ಸರ್ಕಾರ ಏತಕ್ಕೆ ದೊಡ್ಡ ಮನಸ್ಸು ಮಾಡಿಲ್ಲವೋ? ತೂತು ಕುಡಿಕೆಗೆ ತುಪ್ಪ ಕೊಟ್ಟರೆ ಅದು ತೂತಿನಿಂದ ಆಚೆಗೆ ಹೋಗಿ ಆ ತುಪ್ಪ ಹೇಗೆ ವ್ಯರ್ಥವಾಗುತ್ತದೋ ಹಾಗೆ ಎಷ್ಟೇ ಒಳ್ಳೆಯ ಕಾರ್ಯ ಮಾಡಿದರೂ ಕೂಡ ಈ ಪಾನನಿರೋಧದಿಂದ ಆಗತಕ್ಕಂಥಾ ದುಷ್ಪರಿಣಾಮ, ನಷ್ಟ ಇವುಗಳನ್ನು ಹೋಲಿಕೆ

[*Mr. Deputy Speaker in the Chair*]

ಮಾಡಿದರೆ ಇದು ನೀರಸವಾಗಿ ಬೆಲೆ ಇಲ್ಲದೇ ಇದ್ದ ಹಾಗೆ ಆಗುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದು ಈ ಕುಡಿತದ ಹಾವಳಿಯಿಂದ ಮಾನ ಹಾನಿಯಾಗುವುದಲ್ಲದೆ ಪ್ರಾಣ ಹಣ ಹಾನಿಗಳು ಮತ್ತು ಇತರೇ ವ್ಯಾಜ್ಯಗಳು ಉಂಟಾಗುತ್ತದೆ. ಇದರಿಂದ ೫೦ ಕೋಟಿ ರೂಪಾಯಿ ಒಂದು ಕಡೆ ಜಮಾ ಆದರೆ ಇನ್ನೊಂದು ಕಡೆ ಈ ೫೦ ಕೋಟಿ ನಷ್ಟ ಆಗತಕ್ಕಂಥಾದ್ದು ಬರುತ್ತದೆ, ಆ ನಷ್ಟವನ್ನು ಈ ಲಾಭದಿಂದ ತೆಗೆದರೆ ನಿಮಗೆ ಇದರಲ್ಲಿ ಬರತಕ್ಕಂಥಾ ದುಡ್ಡು ಬಹಳ ಕಡಿಮೆ ಎಂದು ಹೇಳಬಹುದು. ನಾವು ಈ ಬಗ್ಗೆ ಎಷ್ಟು ವಾದಮಾಡಿದರೂ ಕೂಡ ವಾದ ವಾದವಾಗಿಯೇ ಇರುತ್ತದೆ. ಒಂದು ವೇಳೆ ಕುಡುಕರು ಒಂದು ಸಂಘ ಮಾಡಿಕೊಂಡು ನಾವು ಪ್ರಜೆಗಳು ನಮಗೆ ಕುಡಿಯುವ ಹಕ್ಕು ಇದೆ, ನಮಗೆ ಕುಡಿಯಂದೇ ಹೋದರೆ ನಮಗೆ ಕಷ್ಟವಾಗುತ್ತದೆ ನಮಗೆ ಕುಡಿಯುವುದಕ್ಕೆ ಲೈಸನ್ಸ್ ಕೊಡಿ ಇಲ್ಲದೇ ಹೋದರೆ ಅರೆಸ್ಟ್ ಮಾಡಬೇಡಿ ಎಂದು ಹೇಳಿದರೆ, ಹಾಗೆಯೇ ಕಳ್ಳರು ಒಂದು ಸಂಘ ಮಾಡಿಕೊಂಡು ನಾವು ಹೊಟ್ಟೆ ಪಾಡಿಗಾಗಿ ಕಳ್ಳತನ್ನ ಮಾಡುತ್ತೇವೆ, ಇರುವವರು ಕೊಡಬೇಕು, ಅವರು ಕೊಡುವುದಿಲ್ಲ ಆದುದರಿಂದ ನಾವು ಕಳ್ಳತನ ಮಾಡುತ್ತೇವೆ ಅಂತ ಹೇಳಿದರೆ ಸುಮ್ಮನಿರುವುದಕ್ಕಾಗುತ್ತದೆಯೇ? ಅದೇ ರೀತಿ ಸಮಾಜ ಘಾತುಕರು ಸಮಾಜ ಘಾತಕ ಕೆಲಸವನ್ನು ಮಾಡಿದರೆ ಆ ರೀತಿ ಮಾಡಕೂಡದು ಎಂದು ಶಾಸನದ ಪ್ರಕಾರ ದಂಡ ವಿಧಿಸುವ ಹಕ್ಕು ಸರ್ಕಾರಕ್ಕೆ ಇದೆ. ಸರ್ಕಾರ ರಾಜ್ಯಭಾರ ಮಾಡತಕ್ಕಂಥಾ ಕಾಲದಲ್ಲಿ ಇಂಥಾದ್ದನ್ನು ಮಾಡಿ ಇಂಥಾದ್ದನ್ನು ಮಾಡಬೇಡಿ ಅಂತ ಸರ್ಕಾರಕ್ಕೆ ಹೇಳುವ ಹಕ್ಕು ಇದೆ. ಪ್ರಜೆಗಳು ಹೇಳಿದ ಹಾಗೆ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಯಾವನಾದರೂ ಕಳ್ಳತನ ಮಾಡಿದರೆ ಅವನಿಗೆ ದಂಡ ವಿಧಿಸುವ ಹಕ್ಕು ಅವನಿಗೆ ಶಿಕ್ಷೆ ಕೊಡುವ ಹಕ್ಕು ಸರ್ಕಾರಕ್ಕೆ ಇದೆ. ಇಂತಹ ವಿಷಯಗಳಲ್ಲಿ ಪ್ರಜೆಗಳಿಗೆ ಇಷ್ಟಬಂದಂತೆ ಹೋಗುವುದಕ್ಕಾಗುವುದಿಲ್ಲ. ಯಾವನಾದರೂ ಜೀವನದಲ್ಲಿ ಜಿಗುಪ್ಸೆಗೊಂಡು ವಿಷ ತೆಗೆದುಕೊಂಡು ಪ್ರಾಣ ಬಿಟ್ಟರೆ ಅದು ತಪ್ಪು ಎನ್ನುವುದು ರಾಜ್ಯದ ಶಾಸನದಲ್ಲಿ ಇದೆ. ಅವನು ವಿಷವನ್ನು ತೆಗೆದುಕೊಂಡು ಸಾಯುತ್ತಾನೆ ಎಂದು ಗೊತ್ತಾದಾಗ ಅವನು ಸಾಯಲಿ ಎಂದು ಸರ್ಕಾರ ಹಾಗೇ ಬಿಟ್ಟು ಬಿಡುವುದಕ್ಕೆ ಸಾಧ್ಯವಿಲ್ಲ. ಅವನ ಪ್ರಾಣ ರಕ್ಷಣೆಗೆ ಮಾನ ರಕ್ಷಣೆಗೆ ಗ್ಯಾರಂಟಿಯನ್ನು ಕೊಡತಕ್ಕಂಥಾ ಕರ್ತವ್ಯ ಸರ್ಕಾರಕ್ಕೆ ಇದೆ. ಅವನು ಮಾಡಿದ್ದನ್ನು ನೋಡಿಕೊಂಡು ಹಾಗೇ ಬಿಟ್ಟುಬಿಡುವುದಕ್ಕೆ ಸಾಧ್ಯವಿಲ್ಲ. ಆದರೆ ಅದರಂತೆಯೇ ಕುಡಿಯುವ ಜನ ನಮಗೆ ಕುಡಿಯುವುದಕ್ಕೆ ಹಕ್ಕು ಇದೆ ಎಂದು ಹೇಳುವ ಹಾಗೇ ಇಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಕೇಳುವ ಅಧಿಕಾರವೂ ಕೂಡ ಇದೆ. ನೀವು ಕುಡಿದು ನಾಶವಾಗುತ್ತೀರಿ, ಎಂದು ಹೇಳುವ

ಅಧಿಕಾರ ಸರ್ಕಾರಕ್ಕೆ ಇದೆ. ಪ್ರಜೆಗಳ ಪ್ರಾಣ ರಕ್ಷಣೆಗೆ ಒಂದು ಶಕ್ತಿಯನ್ನು ರೂಪಿಸತಕ್ಕಂಥಾ ಮಾರ್ಗ, ಮತ್ತು ಅದನ್ನು ತಡೆಗಟ್ಟುವ ಹಕ್ಕು ನಮಗೆ ಇದೆ ಎಂದು ಹೇಳುವಂತ ಸರ್ಕಾರ ಈ ರೀತಿ ಹೇಳತಕ್ಕಂಥಾದ್ದು ಸರಿ ಎಂದು ನಾನು ಅಭಿಪ್ರಾಯಪಡುತ್ತೇನೆ.

11-00 A.M.

ಅಂತಹ ಪರಿಪೂರ್ಣವಾದ ಮತ್ತು ಮಹತ್ತರವಾದ ದುಷ್ಪರಿಣಾಮವು ಈ ಪಾನನಿರೋಧವನ್ನು ಜಾರಿಗೆ ತರದಿದ್ದರೆ ಪ್ರಜೆಗಳ ಮೇಲೆ ಉಂಟಾಗುತ್ತದೆಂದು ಹೇಳುತ್ತೇನೆ. ಈಗ ಎಲ್ಲ ಕಡೆಗಳಲ್ಲಿಯೂ ಪಾನನಿರೋಧವನ್ನು ಜಾರಿಗೆ ತರುತ್ತಿದ್ದಾರೆ. ಉದಾಹರಣೆಗೆ ನಮ್ಮ ಪಕ್ಕದ ರಾಜ್ಯವಾದ ಮದ್ರಾಸ್ ರಾಜ್ಯದಲ್ಲಿ ಈಗಾಗಲೇ ಜಾರಿಗೆ ತಂದಿದ್ದಾರೆ. ಬಡವರಿಗೆ ಕಲ್ಯಾಣವಾಗಲೀ ಎಂಬ ದೃಷ್ಟಿಯಿಂದ ಅಲ್ಲಿ ಈ ರೀತಿ ಮಾಡಿದ್ದಾರೆ. ನಮ್ಮಲ್ಲಿ ಪಾನನಿರೋಧವನ್ನು ಜಾರಿಗೆ ತಂದರೆ, ಸರ್ಕಾರಕ್ಕೆ ಹಣದ ಕೊರತೆ ಬೀಳುತ್ತದೆಂದು ಹೇಳುತ್ತಾರೆ. ಆದರೆ ಮದ್ರಾಸ್ ಸರ್ಕಾರಕ್ಕೆ ಹಣದ ಕೊರತೆ ಇದರೂ ಸಹ ಅದನ್ನು ಜಾರಿಗೆ ತರಲಿಲ್ಲವೇನು ? ಅವರ ಕೈಯಲ್ಲಿ ಆಗುವಂತಹ ಕೆಲಸವನ್ನು ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ಎಂದು ಕೇಳಿದರೆ ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಸರ್ಕಾರದವರು ಏನಾದರೂ ಹೇಳಿದರೆ, ಆಗ ತಲೆತಗ್ಗಿಸುವ ಪರಿಸ್ಥಿತಿ ನಮಗೆ ಬರುತ್ತದೆ. ಇವೊತ್ತಿನದಿವಸ ಇಡೀ ಭಾರತದೇಶದ ಸೂತ್ರದಾರಿಯಾಗಿದ್ದುಕೊಂಡು, ಪ್ರಜಾಸತ್ತಾತ್ಮಕ ನೀತಿನಿಯಮಗಳಿಗನುಸಾರವಾಗಿ ರಾಜ್ಯಭಾರ ಮಾಡುತ್ತಿರುವ ನಮ್ಮ ಈ ನಾಯಕಿಯಾದಂಥ ಶ್ರೀಮತಿ ಇಂದಿರಾಗಾಂಧಿಯವರ ವಾಣಿಯಂತೆ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವುದು ಸಹಜವಾಗಿದೆ, ಸರಿಯಾಗಿದೆ ಮತ್ತು ಧರ್ಮವಾಗಿದೆ. ಆದರೆ ಇಂದು ನಮ್ಮ ಸಮಾಜದಲ್ಲಿ ಒಂದು ಕೆಟ್ಟ ಚಾಳಿ ಬೆಳೆದುಕೊಂಡು ಬಂದಿರುವುದಿಂದ ಏಕ್‌ದಮ್ ಇದನ್ನು ಜಾರಿಗೆ ತರುವುದು ಕಷ್ಟವಾಗಬಹುದು. ಆದಕಾರಣ ಈ ಬಗ್ಗೆ ಇರತಕ್ಕಂಥ ಕೆಡಕಂಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಜನರಿಗೆ ಅರ್ಥವಾಗುವಂತೆ ಮೊದಲು ಪ್ರಚಾರ ಮಾಡಬೇಕಾಗಿದೆ. ಅದರಂತೆ ಈಗಾಗಲೇ ಪಾನನಿರೋಧಕ್ಕೆ ಸಂಬಂಧಪಟ್ಟಂತೆ ರಚನಾತ್ಮಕವಾದಂಥ ಹತ್ತು ಸಲಹೆಗಳನ್ನು ಅವರು ಸೂಚನೆ ಮಾಡಿದ್ದಾರೆ. ಇದರ ಅರ್ಥವಾದರೂ ಏನೆಂದರೆ, ಏಕ್‌ದಂ ಇದನ್ನು ಜಾರಿಗೆ ತಂದು ಬಿಟ್ಟರೆ ಏನಾದರೂ ಹಾನಿಯಾಗಬಹುದೆಂದುಕೊಂಡು. ಮೊದಲು ಜನರಿಗೆ ಪ್ರಚಾರ ಮಾಡುವುದರ ಮೂಲಕ ತಿಳಿಸಿ, ಅವರ ಮನಸ್ಸನ್ನು ಸರಿಯಾದಂಥ ರೀತಿಯಲ್ಲಿ ತಯಾರು ಮಾಡಿ ನಂತರ ಪಾನನಿರೋಧವನ್ನು ಜಾರಿಗೆ ತಂದರೆ ಅದು ಯಶಸ್ವಿಯಾಗುತ್ತದೆಂದು ಅವರು ಸೂಚನೆಯನ್ನು ಕೊಟ್ಟಿದ್ದಾರೆ. ಆ ಒಂದು ಸೂಚನೆಯನ್ನು ಅನುಸರಿಸಿ ನಮ್ಮ ಕರ್ನಾಟಕ ಸರ್ಕಾರದವರೂ ಕೂಡ ಅದನ್ನು ಪ್ರತಿಪಾದನೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಈಗಾಗಲೇ ಒಂದು ಟೆಂಪರೆನ್ಸ್ ಬೋರ್ಡ್‌ನ್ನು ರಚನೆ ಮಾಡಿದ್ದಾರೆ. ಆ ಬೋರ್ಡಿನವರು ಸೂಕ್ತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದರಂತೆ ಪ್ರಚಾರ ಮಾಡುತ್ತಿದ್ದಾರೆ. ಈಗ ತಿಳಿವಳಿಕೆಯಿರತಕ್ಕಂಥ ಜನರು ಒಂದು ಕಡೆ ಹೇಳುವುದೇನೆಂದರೆ, ರಂಬಿರಂಬಿಯಾದಂಥ ಶೇಂದಿಯನ್ನು ಮರಗಳಿಂದ ಇಳಿಸಿ, ಅದನ್ನು ಪಿಪಾಯಿಗೆ ತುಂಬಿ, ಅದರೊಳಕೆ ಕೆಮಿಕಲ್ ಸಾಮಾನುಗಳನ್ನು ಬೆರೆಸಿಬಿಟ್ಟರೆ, ೩ ಅಡಿಗಳಷ್ಟು ಎತ್ತರದವರೆಗೆ ಯಾವಾಗ ನೊರೆ ಉಕ್ಕುತ್ತದೆ ಆಗ ಅದನ್ನು ನೋಡಿದವರಿಗೆ ಕುಡಿಯಬೇಕೆಂಬ ಚಟ ಉಲ್ಬಣವಾಗುತ್ತದೆಂದು ಹೇಳುತ್ತಾರೆ. ಮತ್ತೊಂದು ಕಡೆ ಅದನ್ನು ಕುಡಿಯಬೇಡಿ ಎಂದು ಹೇಳುತ್ತಾರೆ. ಇವೆರಡನ್ನೂ ಸರಿದೂಗಿಸಿ ನೋಡಿದಾಗ ಏನು ಕಂಡುಬರುತ್ತದೆಂದರೆ, ಜನರನ್ನು ಕುಡಿಯುವಂತೆ ಪ್ರಚೋದನೆ ಮಾಡುತ್ತಿರುವುದೇ ಜಾಸ್ತಿಯಾಗುತ್ತಿಯೇನೋ ಎಂದು ಕಂಡುಬರುತ್ತದೆ. ಸರ್ಕಾರದವರು ಏನು ಹೇಳುತ್ತಾರೆಂದರೆ, ನಾವು ಅಧಿಕಾರಿಗಳನ್ನು ಇಟ್ಟುಕೊಂಡು, ಹೆಂಡವನ್ನು ಉತ್ಪನ್ನ ಮಾಡಿ ಒದಗಿಸುತ್ತಿದ್ದೇವೆ. ಆದರೆ ಅದನ್ನು ಕುಡಿಯಿರಿ ಎಂದು ಪ್ರಚಾರ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಆದಕಾರಣ ನಾವು ಅದನ್ನು ಕುಡಿಯಬೇಡಿ ಎಂದು ಜನರಿಗೆ ಆ ಬಗ್ಗೆ ಅಸಹ್ಯ ಹುಟ್ಟಿಸುವಂತಹ ರೀತಿಯಲ್ಲಿ ಪ್ರಚಾರ ಮಾಡಬೇಕಾಗಿದೆ. ಆದರೆ ಈ ದಿಶೆಯಲ್ಲಿ ಆಗುತ್ತಿರುವ ಕಾರ್ಯ ಕಡಿಮೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಈಗಿನ ಪ್ರಚಾರ ಸಾಲದು ಎಂದು ನನ್ನ ಭಾವನೆ.

ಇನ್ನು ಪಾನನಿರೋಧವನು ಜಾರಿಗೆ ತರದಿದ್ದರೆ ಯಾರು ಯಾರಿಗೆ ಲಾಭವಾಗುತ್ತದೆಂದರೆ, ಇದನ್ನು ಮಾರಾಟ ಮಾಡತಕ್ಕಂಥ ಕಂಟ್ರಾಕ್ಟರ್‌ಗಳಿಗೆ ಮತ್ತು ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಲಾಭವಾಗುತ್ತದೆ. ಅಲ್ಲದೇ ಈಗ ಕಳ್ಳಭಟ್ಟಿ ಸಾರಾಯಿ ತಯಾರಿಸುವವರನ್ನು ಹಿಡಿಯು

ತಕ್ಕಂಥ ಅಧಿಕಾರಿಗಳಿಗೂ ಸಹ ಇದರಿಂದ ಲಾಭವಾಗುತ್ತದೆಂದು ನಾವು ತಿಳಿದುಕೊಳ್ಳಬಹುದು. ಕಳೆದ ಆ ಬಡ್ಜೆಟ್ ಅಧಿವೇಶನದ ಸಮಯದಲ್ಲಿಯೂ ಸಹ ನಾನು ಈ ವಿಚಾರದಲ್ಲಿ ವಿಫುಲವಾದಂಥ ವಿಚಾರಗಳನ್ನು ಸರ್ಕಾರದ ಮುಂದೆ ಮಂಡನೆ ಮಾಡಿದಾಗ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹಾಜರಿರಲಿಲ್ಲ, ಅವರ ಪರವಾಗಿ ಮಾನ್ಯ ಹುಚ್ಚುಮಾಸ್ತಿಗೌಡರು ಉತ್ತರ ಕೊಟ್ಟರು, ಈಗಿನ ಅಬ್ಕಾರಿ ಮಂತ್ರಿಗಳು ಆಗ ನಮ್ಮಂತೆಯೇ ಸದಸ್ಯರಾಗಿದ್ದರು. ಮಾನ್ಯ ರೆವಿನ್ಯೂ ಮಂತ್ರಿಗಳು ಅಂದು ಏನು ಉತ್ತರ ಕೊಟ್ಟರೆಂದರೆ, ಪಾನನಿರೋಧವನ್ನು ಜಾರಿಗೆ ತಂದರೆ, ಅದರಿಂದ ಸರ್ಕಾರಕ್ಕೆ ಆಗತಕ್ಕಂಥ ಹಣದ ಕೊರತೆಯನ್ನು ಕೇಂದ್ರಸರ್ಕಾರದವರು ತುಂಬಿಕೊಡುವುದಾದರೆ, ಅದನ್ನು ಜಾರಿಗೆ ತರಬಹುದೆಂದು ಹೇಳಿದರು. ಮತ್ತು ಈ ಬಗ್ಗೆ ಕೇಂದ್ರಕ್ಕೆ ಕಾಗದ ಬರೆದು ಕೇಳುತ್ತೇವೆಂದು ಹೇಳಿದರು. ಆದರೆ ನನಗೆ ತಿಳಿದಿರುವಂತೆ ಕೇಂದ್ರಸರ್ಕಾರಕ್ಕೆ ಈ ವಿಚಾರದಲ್ಲಿ ಯಾವ ಕಾಗದವನ್ನೂ ಬರೆದಿಲ್ಲ. ಹಾಗೇನಾದರೂ ಬರೆದಿದ್ದರೆ ಅವರಿಂದ ನಮಗೆ ಸಮಂಜಸವಾದಂಥ ಉತ್ತರ ಬರುತ್ತಿತ್ತು. ಆದರೆ ಅವರು ಇಲ್ಲಿ ಹೇಳಿದಂತೆ ಮಾಡಲಿಲ್ಲ. ಅಂತಹ ಉತ್ತರವನ್ನು ಇಲ್ಲಿ ಏಕೆ ಕೊಡುತ್ತಾರೋ ನನಗೆ ಅರ್ಥವಾಗುವುದಿಲ್ಲ, ಇಲ್ಲಿ ಏನಾದರು ಉತ್ತರ ಕೊಟ್ಟರೆ, ಅದರಂತೆ ಕೆಲಸವನ್ನು ಶ್ರದ್ಧೆಯಿಂದ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಏಕೆಂದರೆ ಪಾನನಿರೋಧವನ್ನು ಜಾರಿಗೆ ತರತಕ್ಕಂಥ ವಿಚಾರದಲ್ಲಿ ಈಗಾಗಲೇ ಒಂದು ರೀತಿಯಲ್ಲಿ ಪ್ರಚಾರ ನಡೆದಿದೆ. ಮತ್ತು ಆ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ ಕಳೆದ ಸಲ ಇದೇ ವಿಷಯದಲ್ಲಿ ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟರುಎಂಬುದನ್ನು ನಾನು ಓದಿ ನೋಡಬೇಕಾಗಿಲ್ಲ. ಈಗಲೂ ಅದು ನನ್ನ ಕಿವಿಯಲ್ಲಿ ಮಾತನಾಡಿದಂತೆ ಇದೆ ಆದರು ಪ್ರತಿಸಲವೂ ಇವರು ಕಂಡುಕರ ತಂಟೆಗೆ ಏಕೆ ಬರುತ್ತಾರೋ ಎಂದು ಕೇಳಬಹುದು. ಇಂದು ಏನಾಗಿ ಬಿಟ್ಟಿದೆಯೆಂದರೆ ಕುಡಿಯದೇ ಇರುವವರಿಗಿಂತ ಕುಡಿಯುವವರಸಂಖ್ಯೆಯೇ ಜಾಸ್ತಿಯಾಗಿಬಿಟ್ಟಿದೆ ಆದಕಾರಣ ಪಾನನಿರೋಧವನ್ನು ಜಾರಿಗೆ ತರಬೇಕೇ ಅಥವಾ ಬೇಡವೇ ಎಂಬುದನ್ನು ಡೆಮಾಕ್ರಸಿ ಪ್ರಿನ್ಸಿಪಲ್ ಪ್ರಕಾರ ಓಟಿನ ಮೂಲಕ ತೀರ್ಮಾನ ಮಾಡಲು ಜನತೆಗೇ ಬಿಟ್ಟರೆ, ಕುಡಿಯುವವರೇ ಜಾಸ್ತಿಯಿರುವುದರಿಂದ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಈ ಕಾರಣದಿಂದ ಜನತೆಯ ಅಭಿಪ್ರಾಯವನ್ನು ಈ ವಿಚಾರದಲ್ಲಿ ಕೇಳುವುದಕ್ಕೆ ಸರಕಾರಕ್ಕೆ ಶಕ್ತಿ ಇಲ್ಲವೇನೋ ಎಂಬತಕ್ಕಂಥ ಪ್ರಶ್ನೆಯೂ ಬರುತ್ತದೆ. ಮತ್ತೊಂದು ಮುಖ್ಯವಾದಂಥ ವಿಚಾರವೆಂದರೆ, ಸಾರ್ವಜನಿಕ ರಸ್ತೆಗಳ ಹತ್ತಿರ ದೇವಾಲಯಗಳಿರುವ ಕಡೆ, ಬಡವರು ವಾಸ ಮಾಡುವ ಕಡೆ, ಸ್ಕೂಲುಗಳಿರುವ ಕಡೆ ಹೆಂಡದಂಗಡಿಗಳನ್ನು ತೆರೆಯಬಾರದೆಂದು ಕಾನೂನಿನಲ್ಲಿ ಹೇಳಲಾಗಿದೆ ಇದು ಜೀವಂತವಾಗಿರತಕ್ಕಂಥ ಕಾನೂನು. ಈ ರೀತಿ ಕಾನೂನಿದ್ದರೂ ಸಹ ಅದರಂತೆ ನಡೆದುಕೊಳ್ಳುತ್ತಿಲ್ಲ. ಅದಕ್ಕೆ ಕಾರಣ ಕೇಳಿದರೆ ಸರ್ಕಾರದವರು ಏನು ಹೇಳುತ್ತಾರೆಂದರೆ, ಪ್ರಜಾಸಂಖ್ಯೆಗನುಗುಣವಾಗಿ ಅಂಗಡಿಗಳನ್ನು ತೆರೆಯಬೇಕೆಂದು ಜನರು ಕೇಳುವುದರಿಂದ ಮತ್ತು ಬಯಲು ಪ್ರದೇಶಗಳಲ್ಲಿ ಎಲ್ಲಿ ಹೋದರು ಸಾರ್ವಜನಿಕ ರಸ್ತೆಗಳು ಮತ್ತು ದೇವಸ್ಥಾನಗಳಿರುವುದರಿಂದ, ಕುಡಿಯುವವರ ಹಿತದೃಷ್ಟಿಯಿಂದ ಅಂಗಡಿಗಳನ್ನು ದೂರವಿಡುವುದು ಕಷ್ಟವಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ಕೆಲವು ಸಲ ಈ ಕಾನೂನಿನ ಪ್ರಕಾರ ಅಂಗಡಿಗಳನ್ನು ಆದಷ್ಟು ದೂರ ಇಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಈ ಎರಡು ಉತ್ತರಗಳನ್ನು ಹೋಲಿಕೆ ಮಾಡಿ ನೋಡಿದೆ, ಮನಸ್ಸಿದ್ದ ಕಡೆ ಮಾರ್ಗವಿದೆ ಎಂಬ ತತ್ವಕ್ಕೆ ಲೋಪವಾಗುತ್ತದೆಂದು ಹೇಳಬಹುದು. ಒಟ್ಟಿನಲ್ಲಿ ಈ ಕಾನೂನನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲವೆಂದು ಹೇಳಬಹುದು. ಉದಾಹರಣೆಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲಿಯೇ ಇರತಕ್ಕಂಥ ಒಂದು ಹಳ್ಳಿಯ ಮೈನ್ ರೋಡಿನಲ್ಲಿಯೇ ಒಂದು ಹೆಂಡದಂಗಡಿಯಿದೆ. ಅದನ್ನು ಅಲ್ಲಿಂದ ದೂರವಿಡಬೇಕೆಂದು ನಾನು ೩ ಸಲ ಕಾಗದ ಬರೆದೆ, ಆರು ಸಲ ಸಂಬಂಧಪಟ್ಟವರೊಡನೆ ಪ್ರೈವೇಟ್ ಆಗಿ ಮಾತನಾಡಿದೆ. ಅವರು ಅದಕ್ಕೆ ಕೊಟ್ಟ ಉತ್ತರದಿಂದ ನಾನು ಒಂದು ದಿನದಲ್ಲಿಯೇ ಅದನ್ನು ಸರಿಪಡಿಸುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ ಇಲ್ಲಿಯವರೆಗೆ ಆ ಅಂಗಡಿ ಅಲ್ಲಿಯೇ ಇದೆ. ಅಂದರೆ ನಾವು ಏನು ಅರ್ಥಮಾಡಿಕೊಳ್ಳಬೇಕು ? ಇನ್ನೊಂದು ಸಲ ಹರಾಜು ಆಗುವವರೆಗೆ ಅದು ಅಲ್ಲಿಯೇ ಇರಲಿ ಎಂದುಸುಮ್ಮನಿದ್ದಾರೋ, ಅಥವಾ ಅದನ್ನು ಅದು ಅಲ್ಲಿಯೇ ಇದ್ದರೆ ಎರಡು ಕಾಸು ಹೆಚ್ಚು ಲಾಭ ಬರುತ್ತದೆಂದು ಸುಮ್ಮನಿದ್ದಾರೋ, ಅಥವಾ ಅದನ್ನು ಅಲ್ಲಿಂದ ತೆಗೆದರೆ ಅಲ್ಲಿಯ ಪ್ರಜೆಗಳು ನೆಮ್ಮದಿಯಿಂದ ಇರಲಾರರು ಎಂದು ಸುಮ್ಮನಿದ್ದಾರೋ ಗೊತ್ತಾಗುವುದಿಲ್ಲ. ದೇವಾಲಯಗಳ ಹತ್ತಿರ ಹೆಂಡದಂಗಡಿಗಳನ್ನು ಇಡಬೇಡಿ ಎಂದು ಹೇಳಿದರೆ, ದೇವಾಲಯಗಳನ್ನೇ ಎಲ್ಲಿ ಹೆಂಡದಂಡಿಗಳನ್ನಾಗಿ ಕನ್‌ವರ್ಟ್ ಮಾಡಿಬಿಡುತ್ತಾರೋ ಎಂದು ಜನರು ತಿಳಿದುಕೊಂಡು ಸುಮ್ಮನಿರುವಂತಹ ಪ್ರಸಂಗ ಸಹ ಬಂದಿದೆ ಒಟ್ಟಿನಲ್ಲಿ ಸರ್ಕಾರದವರು ಪಾನನಿರೋಧ

ವನ್ನು ಜಾರಿಗೆ ತರುವ ವಿಚಾರದಲ್ಲಿ ಸಾಕಷ್ಟು ನಿಗಾ ಕೊಡಲಿಲ್ಲವೆಂದು ಹೇಳಬಹುದು. ಈ ಬಗ್ಗೆ ಅನೇಕರು ಅನೇಕ ರೀತಿಯಿಂದ ವಾದ ಮಾಡಬಹುದು ? ಈಗ ನಾವು ವಿಧಾನಸೌಧವನ್ನು ಒಂದು ಪವಿತ್ರವಾದಂಥ ಸ್ಥಳವೆಂದು ಭಾವನೆ ಮಾಡಿಕೊಂಡಿದ್ದೇವೆ. ಇದು ಒಂದು ಟೆಂಪಲ್ ಆಫ್ ಟೆಂಪಲ್ಸ್ ಎಂಬ ಭಾವನೆ ಇದೆ. ಇಂತಹ ಕಡೆಯೂ ನಾನಾ ಬಣ್ಣಗಳಿಂದ ಕೂಡಿದ ಹೆಂಡವನ್ನು ಮಾರಾಟ ಮಾಡಿದರೆ ಅದರಲ್ಲಿ ತಪ್ಪೇನಿದೆ ಎಂದು ಕೆಲವರು ವಾದ ಮಾಡಬಹುದು. ಆಗ ಏನಾಗುತ್ತದೆಂದರೆ ನೌಕರರು ತಮ್ಮ ಸಂಬಳದಲ್ಲಿ ೨೫ ರಿಂದ ನೂರು ರೂ. ಗಳವರೆಗೆ ಇದಕ್ಕಾಗಿಯೇ ಖರ್ಚು ಮಾಡಿಬಿಡುತ್ತಾರೆ. ಈಗಲೇ ಎನ್.ಜಿ.ಓ.ಗಳಿಗೆ ಬರುವ ಸಂಬಳ ಅವರ ಹೆಂಡತಿ ಮಕ್ಕಳಿಗೆ ಅನ್ನ ಬಟ್ಟೆಗೆ ಸಾಲುತ್ತಿಲ್ಲ. ಇನ್ನು ಹೆಂಡದಂಗಡಿಯನ್ನು ಸಹ ಇಲ್ಲಿ ತೆರೆದುಬಿಟ್ಟರೆ ಅವರು ಬರಿಗೈನಲ್ಲಿ ಮನೆಗೆ ಹೋಗಬೇಕಾಗುತ್ತದೆ. ಈಗ ಇಲ್ಲಿ ಕಾಫಿ ಕುಡಿಯಲು ಅವಕಾಶವಿರುವಾಗ, ಹೆಂಡ ಕುಡಿಯಲು ಸಹ ಅವಕಾಶ ಕೊಟ್ಟರೆ, ಅದರಲ್ಲಿ ತಪ್ಪೇನಿದೆ ಎಂಬತಕ್ಕಂಥ ವಾದವನ್ನು ಯಾರಾದರು ಮಂಡಿಸಿದರೆ ಅದು ತಿಳಿಗೇಡಿತನದ ವಾದವೆಂದು ಹೇಳಬೇಕಾಗುತ್ತದೆ. ಅದಕೋಸ್ಕರವೇ ಸರ್ಕಾರ ಒಂದು ಮಾರಲ್ ಪ್ರಿನ್ಸಿಪಲ್ಸ್ ಪ್ರಕಾರ ಇದರ ಬಗ್ಗೆ ಹೋಗ ತಕ್ಕದ್ದು ಸೂಕ್ತವಾಗಿದೆ. ಏನೋ ಸರ್ಕಾರಕ್ಕೆ ಇದರಿಂದ ದುಡ್ಡು ಹೆಚ್ಚಿಗೆ ಬರುತ್ತದೆ ಅದು ಹೇಗೋ ನಡೆದುಕೊಂಡು ಹೋಗಲಿ ಎಂಬುದಾಗಿ ಹೇಳಬಾರದು. ಅದು ಬಹಳವಾಗಿ ತಪ್ಪಾಗುತ್ತದೆ. ಆದ್ದರಿಂದ ಸರ್ಕಾರದವರು ಧೈರ್ಯಮಾಡಿ ಇದನ್ನು ತೆಗೆದುಹಾಕಬೇಕು. ಕುಡಿತದಿಂದ ಆಗತಕ್ಕ ಹಾನಿಯನ್ನು ತಪ್ಪಿಸಬೇಕೆಂದು ನಾನು ಹೇಳುತ್ತಿದ್ದೇನೆ. ಕೇಂದ್ರಸರ್ಕಾರದವರನ್ನು ಬೇಕಾದರೆ ನಮ್ಮ ಸರ್ಕಾರದವರು ದುಡ್ಡು ಕೊಡಿ ಎಂಬುದಾಗಿ ಕೇಳಲಿ. ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಮೊನ್ನೆ ಹೊಸದಾಗಿ ಒಂದು ಕಾನೂನನ್ನು ತಂದಿದ್ದೀರಿ. ಅದೇ ರೀತಿಯಲ್ಲಿ ೫೦—೬೦ ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ ಎಮರ್ಜೆನ್ಸಿ ಟೈಂ ಎಂದು ಹೇಳಿ ಒಳ್ಳೆಯದು ಏನೇನು ಇದೆಯೋ ಅದನ್ನು ಮಾಡಬೇಕು. ಹೆಂಡದ ಇಲಾಖೆಯನ್ನು ತೆಗೆದುಹಾಕಿ, ಎಮರ್ಜೆನ್ಸಿ ಪವರನ್ನು ಉಪಯೋಗಿಸಿಕೊಂಡು ನೀವು ಏನು ಬೇಕಾದರೂ ಮಾಡಿ, ಅದಕ್ಕೆ ಏನು ಅಡ್ಡಿ ಇದೆ ? ಹೆಂಡದ ಇಲಾಖೆಯನ್ನು ಏಕೆ ತೆಗೆಯಿರಿ ಎಂಬುದಾಗಿ ಹೇಳುತ್ತೇನೆಂದರೆ, ಈಗಿನ ಕಳ್ಳಭಟ್ಟಿಸಾರಾಯಿಂದ ಅನೇಕ ಪ್ರಜೆಗಳು ಸಾಯುತ್ತಿದ್ದಾರೆಂದು ಹೇಳಿದರೆ ಅದು ತಪ್ಪು ಎಂಬುದಾಗಿ ಹೇಳಿ ಮತ್ತೆ ಅದನ್ನೇ ಪುನಃ ಮಾಡುತ್ತಾರೆ. ಒಟ್ಟಿನಲ್ಲಿ ಇದನ್ನು ಮುಂದುವರಿಸುವುದು ಬೇಡ. ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಒಟ್ಟಿನಲ್ಲಿ ನಮ್ಮ ಪ್ರಜಾಕೋಟಿ ನೆಮ್ಮದಿಯಾಗಿ ಬಾಳುವುದಕ್ಕೆ ಮತ್ತು ಒಂದು ಸುಖಜೀವನ ನಡೆಸುವುದಕ್ಕೆ ಸರ್ಕಾರದವರು ಅವಕಾಶಮಾಡಿಕೊಡಬೇಕೆಂದು ಹೇಳುತ್ತೇನೆ. ನೀವು ಉತ್ತರದಲ್ಲಿ ಹೇಳುವ ಪ್ರತಿಯೊಂದು ಮಾತು ಮತ್ತು ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಅದು ಪ್ರತಿಯೊಬ್ಬರಿಗೂ ಮಾರ್ಗದರ್ಶಕವಾಗಿರಬೇಕು. ಇದರ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಪ್ರಾಬ್ಲಮ್ಸ್ ಏನಿದೆಯೋ ಅದನ್ನು ತಿಳಿದುಕೊಳ್ಳಲು ಸರಿಯಾದ ಉತ್ತರ ಬೇಕು. ವಜ್ರಮುಷ್ಟಿಯಂತೆ ನಿಮ್ಮ ಉತ್ತರ ಇರಬೇಕು. ಏಕೆಂದರೆ ಸತ್ಯಕ್ಕೆ ಬೆಲೆ ಇದೆ. ಯಾವುದಕ್ಕೂ ಸಬೂಬು ಹೇಳಬಾರದು ಸರ್ಕಾರದವರು ಇದರ ಬಗ್ಗೆ ಒಂದು ಉತ್ತಮವಾದ ನೀತಿಯನ್ನು ಅನುಸರಿಸಿದರೆ ಅದಕ್ಕೆ ಎಂದೆಂದಿಗೂ ಬೆಲೆ ಇದ್ದೇ ಇರುತ್ತದೆ. ಆದರಿಂದ ನಿಜವಾಗಿ ಪ್ರಜಾಕೋಟಿಗೆ ಹೆಚ್ಚಿನ ಉಪಕಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶ್ರೀ ಪ್ರಭಾಕರ್ ಅವರು ತಂದಿರುವ ನಿಲುವಳಿ ಸೂಚನೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಹಿಂದೆ ನಡೆದ ಒಂದು ಪ್ರಕರಣ ನನ್ನ ಮನಸ್ಸಿಗೆ ಇವತ್ತು ಹೆಚ್ಚಿಗೆ ರೂಪು ಕೊಟ್ಟಿದೆ. ಆಗ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಾರ್ಯದರ್ಶಿಯಾಗಿದ್ದವರು ಮತ್ತು ರಾಜ್ಯದ ಮಂತ್ರಿಗಳಾಗಿದ್ದವರು ಈಗ ರಾಜ್ಯ ಸಭಾ ಸದಸ್ಯರಾಗಿದ್ದವರು ನಮ್ಮ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಭೇಟಿ ಕೊಟ್ಟಿದ್ದರು. ಅವರು ಕಳಕಳಿಯಿಂದ ಒಂದು ಮಾತನ್ನು ಹೇಳಿದರು. ಅದೇನೆಂದರೆ ಪಾನನಿರೋಧವನ್ನು ರದ್ದುಮಾಡಬೇಕೆಂದು ಇದರಿಂದ ದಲಿತ ವರ್ಗದವರು ಪಡತಕ್ಕ ಕಷ್ಟ ಇತರರಿಗೆ ಅರಿವಾಗುವುದಿಲ್ಲ. ನನ್ನ ಎದುರಿನಲ್ಲಿಯೇ ನನ್ನ ತಂದೆ ಕುಡಿದು ಬಂದು ನನ್ನ ತಾಯಿಗೆ ಹೊಡೆದ ದೃಷ್ಟಾಂತ ನಾನು ನೆನೆಸಿಕೊಂಡರೆ ಈ ದೇಶದಲ್ಲಿ ಪಾನನಿರೋಧ ರದ್ದುಮಾಡಿದರೆ ಯಾವ ಒಂದು ವರ್ಗಕ್ಕೆ ಅನ್ಯಾಯವಾಗುತ್ತದೆನ್ನುವ ಕಲ್ಪನೆ ನನಗೆ ಈಗ ಮೂಡಿ ಬರುತ್ತಿದೆ. ಈ ದೃಷ್ಟಿಯಿಂದ ದಲಿತ ವರ್ಗದವರು ಉದ್ಧಾರವಾಗಬೇಕೆಂದು ಹೇಳಿ ಪಾನನಿರೋಧವನ್ನು ದೇಶದಲ್ಲಿ ಕೂಡಲೇ ಜಾರಿಗೆ ತರಬೇಕೆಂದು ಅವರ ಒಂದು ವಾದವನ್ನು ಮಂಡಿಸಿದರು. ಆದರೂ ಕೂಡ

ಪಾನನಿರೋಧ ರದ್ದು ಆಯಿತು. ಇವತ್ತು ಹಳ್ಳಿಗಳಲ್ಲಿ ಮಧ್ಯಾಹ್ನ 3 ಗಂಟೆಯಾದ ಮೇಲೆ ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಸಾಮಾನ್ಯವಾಗಿ ಅಲ್ಲಿ ಎಲ್ಲಾ ಪ್ರದೇಶಗಳಲ್ಲಿ ರಸ್ತೆಗಳಲ್ಲಿಯೇ ಕುಡಿದು ಬೀಳತಕ್ಕ ಹಳ್ಳಿಗರನ್ನು ನಾವು ನೋಡಬಹುದು. ನಮ್ಮ ಹಳ್ಳಿಯಲ್ಲಿ ಒಬ್ಬ ಕಮ್ಮಾರ, ಒಳ್ಳೆಯ ಕೆಲಸಗಾರ, ದಿವಸಕ್ಕೆ 20 ರೂಪಾಯಿಗಳವರೆಗೂ ದುಡಿಯುತ್ತಾನೆ. ಆ ರೀತಿ ದುಡಿದ ದುಡ್ಡನ್ನು ಪೂರಾ ಕುಡಿಯುವುದಕ್ಕೆ ಉಪಯೋಗಿಸುತ್ತಾನೆ. ಆ ರೀತಿ ಕುಡಿದ ಮೇಲೆ ಉಳಿದ 10 ರೂಪಾಯಿಗಳ ನೋಟನ್ನು ಇಟ್ಟುಕೊಂಡು ನೋಡು, ಇದು ನಾನು ದುಡಿದುದು, ಇದು ನನ್ನನ್ನು ದುಡಿದುದಲ್ಲ. ಈ 10 ರೂಪಾಯಿಗಳ ನೋಟನ್ನು ಹರಿಯುತ್ತೇನೆಂದು ಹರಿದು ಹಾಕುತ್ತಾನೆ ಇದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತವೆ ಇದರಿಂದ ಆಗತಕ್ಕ ಅಪಾಯ ಕೇವಲ ಕೆಲವು ವರ್ಗದವರಿಗೇ ಹೊರತು ಮೇಲ್ ವರ್ಗದವರಿಗೆ ಅಂತಹ ಅಪಾಯವೇನೂ ಇಲ್ಲ. ಸಮಾಜವಾದದಲ್ಲಿ ಕೆಲವೇ ವರ್ಗದವರಿಗೆ ಅಪಾಯವಾಗುವುದು ಸರಿಯಲ್ಲ. ದಲಿತ ವರ್ಗದ ಜನರು ಬೆವರು ಸುರಿಸಿ ದುಡಿದಂಥ ಹಣವನ್ನು ಈ ರೀತಿಯಾಗಿ ಹಾಳುಮಾಡುತ್ತಿದ್ದಾರೆ. ಇವತ್ತು ಈ ರಾಜ್ಯಕ್ಕೆ ಬೇಕಾದಂಥ ಕೋಟಿ ರೂಪಾಯಿಗಳಷ್ಟು ಹಣವನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ? ದಲಿತ ವರ್ಗದವರು ಅಷ್ಟೊಂದು ಹಣವನ್ನು ಸಂಪಾದನೆ ಮಾಡಿ ಹೀಗೆ ಅನ್ಯಾಯ ಮಾಡುವುದಕ್ಕೆ ಹೊರಟರೆ ಇನ್ನು ಏನು ಮಾಡುವುದಕ್ಕೆ ಸಾಧ್ಯ ? ಈ ಪ್ರಶ್ನೆಯನ್ನು ನಾವು ಅಮೂಲಾಗ್ರವಾಗಿ ಯೋಚನೆ ಮಾಡಬೇಕಾದ ಸಂದರ್ಭ ಬಂದಿದೆ ಇವತ್ತು ಒಂದು ವಾದ ಬರುತ್ತಿದೆ. ಇವತ್ತು ನಾವು ಪ್ರೊಹಿಬಿಷನ್ ತಂದರೂ ಕೂಡ ಹಳ್ಳಿಗಳಲ್ಲಿ ನವಸಾಗರ ಬೆರೆಸಿದ ಕಳ್ಳಭಟ್ಟಿ ಸಾರಾಯಿ ಕುಡಿದು ತಮ್ಮ ದೇಹವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆಂಬ ವಾದವನ್ನು ಈಗ ಜನರು ಮುಂದಿಡುತ್ತಿದ್ದಾರೆ. ನಾವು ಅದು ಸರಿಯಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಇವತ್ತು ಹಳ್ಳಿಗಾಡಿಗಳಲ್ಲಿ ಹಾಗೂ ಎಲ್ಲಾ ಕಡೆಗಳಲ್ಲಿಯೂ ಕಳ್ಳಭಟ್ಟಿ ಸಾರಾಯಿಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಹುದು. ಆದರೆ ಈ ಕುಡಿತ ಇರುವುದು ಸಮಾಜದಲ್ಲಿ ಒಂದು ವ್ಯಾಧಿ. ಇದು ತಲೆ ತಲಾಂತರದಿಂದ ಬಂದಿರತಕ್ಕ ವ್ಯಾಧಿ. ಇಂತಹ ಒಂದು ವ್ಯಾಧಿಯನ್ನು ನಿರ್ಮೂಲ ಮಾಡಬೇಕಾದರೆ ಕೇವಲ ಶಾಸನದಿಂದ ಆಗುವುದಿಲ್ಲ. ಇದರ ಬಗ್ಗೆ ಆದಷ್ಟು ಪ್ರಚಾರ ಮಾಡಬೇಕು. ಕುಡಿತದಿಂದ ಹೆಚ್ಚಿಗೆ ಅಪಾಯ ಇದೆಯೆಂಬುದನ್ನು ಪ್ರಚಾರ ಮಾಡಬೇಕು. ಈ ದೃಷ್ಟಿಯಿಂದ ಕಾನೂನು ರೀತ್ಯ ಇದನ್ನು ನಿಲ್ಲಿಸಬೇಕೆಂಬುದು ಕಷ್ಟವೆಂದು ಒಪ್ಪುವುದಕ್ಕೆ ಸಾಧ್ಯವಾದರೂ ಕೂಡ ನಾವು ಈ ದೇಶದಲ್ಲಿ ಕೆಲಸಮಾಡುವುದು ನಮ್ಮ ಜವಾಬ್ದಾರಿ. ಯಾವ ಮಹಾತ್ಮರು ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರೋ ಅವರು ಈ ಒಂದು ದೇಶದಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕೆಂಬ ನಿಲುವನ್ನು ಇಟ್ಟುಕೊಂಡಿದ್ದರು ಆದರೆ ಕಳೆದ 29 ವರ್ಷಗಳಿಂದಲೂ ಪ್ರೊಹಿಬಿಷನ್ ತರಬೇಕೆಂದು ಹೇಳುತ್ತಿದ್ದರೂ ಅದು ಇನ್ನೂ ಸರಿಹೋಗಲಿಲ್ಲ ಎಲ್ಲಾ ಕಡೆಯೂ ಇದರ ಪ್ರಚಾರವೇನೋ ನಡೆದಿದೆ. ರಷ್ಯಾದಲ್ಲಿ ಮೊದಲು ಪ್ರೊಹಿಬಿಷನ್ನನ್ನು ಜಾರಿಗೆ ತಂದರೂ ಮತ್ತೆ ಕುಡಿತವನ್ನು ಅಲ್ಲಿ ಜಾರಿಗೆ ತಂದಿದ್ದಾರೆ. ಅದಕ್ಕೆ ಯಾವ ಕಾರಣವಿತ್ತೋ ನನಗೆ ಗೊತ್ತಿಲ್ಲ. ಇವತ್ತು ಒಟ್ಟಿನಲ್ಲಿ ಇದರಿಂದ ಆಗತಕ್ಕ ಅನ್ಯಾಯವನ್ನು ಕೂಡಲೇ ತಪ್ಪಿಸಬೇಕು. ಇವತ್ತು ಹೆಚ್ಚಿಗೆ ಯಾವ ಒಂದು ವರ್ಗ ಮುಂದೆ ತರಬೇಕೆಂದು 20 ಅಂಶಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೋ ಆ ಒಂದು ವರ್ಗ ಮೇಲಕ್ಕೆ ಬರಬೇಕಾದರೆ ಕುಡಿತವನ್ನು ಕೂಡಲೇ ಸಂಪೂರ್ಣವಾಗಿ ನಿಲ್ಲಿಸಬೇಕು. ಇವತ್ತು ಒಬ್ಬ ಹಮಾಲ, ಒಬ್ಬ ದೋಬಿ ಅಥವಾ ಒಬ್ಬ ಸಾಮಾನ್ಯ ಕೆಲಸಮಾಡುವ ಮನುಷ್ಯನ ದುಡಿಮೆಯೇನೂ ಕಡಿಮೆ ಇರುವುದಿಲ್ಲ. ಒಬ್ಬೊಬ್ಬನೂ ಕೈ ಕೆಲಸ ಮಾಡುವವನು ದಿವಸಕ್ಕೆ 20–25 ರೂಪಾಯಿಗಳಷ್ಟು ಸಂಪಾದನೆ ಮಾಡುತ್ತಾನೆ. ಇವತ್ತು ಅದನ್ನು ಲೆಕ್ಕ ಹಾಕಿದರೆ ಅದು ಒಬ್ಬ ತಹಸೀಲ್ದಾರ್ ಸಂಬಳಕ್ಕಿಂತ ಜಾಸ್ತಿಯಾಗುತ್ತದೆ. ಆ ರೀತಿಯಾಗಿ ಸಂಪಾದನೆ ಮಾಡುವವನು ಸರಿಯಾಗಿ ತನ್ನ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡದೆ ತನ್ನ ಹೆಂಡತಿ ಮಕ್ಕಳನ್ನು ಸರಿಯಾಗಿ ನೋಡದಿದ್ದರೆ ಇದಕ್ಕೆ ಕಾರಣವೇನೆಂದು ಹೇಳಿದರೆ ಕೇವಲ ಕುಡಿತವೇ ಮುಖ್ಯ ಕಾರಣವೆಂದು ನಾನು ಹೇಳಬೇಕಾಗಿದೆ. ಇದರಲ್ಲಿ ಸಮಾಜದ ಹಿತದೃಷ್ಟಿಯನ್ನು ಇಟ್ಟುಕೊಳ್ಳಬೇಕು ಪ್ರೊಹಿಬಿಷನ್ ಸಂಪೂರ್ಣವಾಗಿ ಇಡೀ ದೇಶದಲ್ಲಿಯೇ ಜಾರಿಗೆ ತರಬೇಕು ಇದರಿಂದ ದೊಡ್ಡವರಿಗೆ ಬಹಳ ತೊಂದರೆಯಾಗುತ್ತದೆ. ಆದಕಾರಣ ಅಂತಹವರಿಗೆ ಮೆಡಿಕಲ್ ಲೈಸೆನ್ಸ್ ಕೊಟ್ಟು ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಅಂತಹವರು ಲೈಸೆನ್ಸ್ ತೆಗೆದುಕೊಳ್ಳಬಹುದು. ಲೈಸೆನ್ಸ್ ಮುಖಾಂತರ

ಕುಡಿಯುವ ವ್ಯವಸ್ಥೆಯನ್ನು ದೊಡ್ಡವರಿಗೆ ಮಾಡುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಆದರಿಂದ ಈ ಒಂದು ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಪ್ರೊಹಿಬಿಷನ್ನನ್ನು ಅಮೂಲಾಗ್ರವಾಗಿ ಜಾರಿಗೆ ತರಬೇಕು. ಆದರೆ ಒಂದು ಕಡೆ ಪಾನ ನಿರೋಧವನ್ನು ಜಾರಿಗೆ ತರುವುದು ಇನ್ನೊಂದು ಕಡೆ ಕುಡಿತವನ್ನು ಜಾರಿಯಲ್ಲಿಡುವುದು ಬಹಳ ಅನ್ಯಾಯವಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ಪ್ರೊಹಿಬಿಷನ್ ಇರುವುದು ಇನ್ನು ಕೆಲವು ಜಿಲ್ಲೆಗಳಲ್ಲಿ ಪ್ರೊಹಿಬಿಷನ್ ಇರುವುದಿಲ್ಲವೆನ್ನುವುದು ಸರಿಯಲ್ಲ. ಕುಡುಕನು ತಾನು ಕುಡಿಯುವುದಕ್ಕೆ ಬೆಂಗಳೂರಿಗೆ ಶುಕ್ರವಾರ ಹಾಗೂ ಶನಿವಾರ ಬಂದು ಹೋಗುವುದಕ್ಕೆ ಎಷ್ಟೋ ಹಣವನ್ನು ಖರ್ಚು ಮಾಡುತ್ತಾನೆ. ಹೀಗೆ ಅನೇಕರು ನಾನಾ ಜಿಲ್ಲೆಗಳಿಂದ ಇಲ್ಲಿಗೆ ಬಂದು ಹೋಗುತ್ತಾರೆ. ಕೇವಲ ಕುಡಿತಕ್ಕಾಗಿಯೇ ಬರುವವರು ಅನೇಕರಿದ್ದಾರೆ. ಹೋಟಲಿಗೆ ದುಡ್ಡು ಕೊಡುವುದು ಕುಡಿತಕ್ಕೆ ದುಡ್ಡು ಕೊಡುವುದು ಹೀಗೆ ಮೂರು ದಿವಸಗಳ ಕಾಲ ಇಲ್ಲಿಯೇ ಇದ್ದು ನಂತರ ಅವರ ಊರಿಗೆ ವಾಪಸ್ಸು ಹೋಗುತ್ತಾರೆ. ಆದ್ದರಿಂದ ದೇಶಾದ್ಯಂತ ಪ್ರೊಹಿಬಿಷನ್ ಜಾರಿಗೆ ತಂದೆ ಇದ್ದರೆ ಬಹಳ ಅನ್ಯಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೊತೆಗೆ ಸರ್ಕಾರದವರು ಯಾವ ಯಾವ ಘಟಕಗಳಿಗೆ ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೋ ಅವುಗಳ ಪರಿಶೀಲನೆಯನ್ನು ಮಾಡಬೇಕೆಂದು ಮಾನ್ಯ ಅಬ್ಕಾರಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅವುಗಳನ್ನು ನೋಡಿದರೆ ಎಲ್ಲಿ ಸ್ಕೂಲುಗಳು ಇರುತ್ತವೆ, ದೇವಸ್ಥಾನಗಳು ಇರುತ್ತವೆ ನಿಜವಾಗಿ ಹೇಳಬೇಕೆಂದರೆ ಎಲ್ಲಿ ಧಾರ್ಮಿಕವಾಗಿ ಒಳ್ಳೆಯ ಕಾರ್ಯಗಳು ನಡೆಯುತ್ತವೆ ಅಂತಹ ಕಡೆಗಳಲ್ಲಿ ಇವುಗಳನ್ನು ನಡೆಸುತ್ತಿರುತ್ತಾರೆ ಇವುಗಳನ್ನು ನೋಡಿದರೆ ನಿಜವಾಗಿಯೂ ನಾವು ಬಹಳ ಶೋಚನೀಯವಾದ ಸಂಗತಿಯನ್ನು ಹೇಳದೆ ಗತ್ಯಂತರವಿಲ್ಲ. ಇಷ್ಟು ಹೇಳಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ಮಾನ್ಯ ಪ್ರಭಾಕರ್‌ರವರು ತಂದಿರತಕ್ಕಂಥ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೆ. ಪ್ರಭಾಕರ್‌ರವರು ತಂದಿರತಕ್ಕಂಥ ನಿರ್ಣಯವನ್ನು ಸಮರ್ಥಿಸಿ ನನ್ನ ಎರಡು ಮಾತುಗಳನ್ನು ಹೇಳಬೇಕೆಂದು ಇಷ್ಟ ಪಡುತ್ತೇನೆ. ಅಧ್ಯಕ್ಷರೇ, ಕುಡಿತ ಅನ್ನತಕ್ಕಂಥದ್ದು ಸಮಾಜಕ್ಕೆ ಅದು ಒಂದು ಶಾಪ. ಅದರಲ್ಲೂ ನಮ್ಮಂಥ ಬಡ ರಾಷ್ಟ್ರಗಳಿಗೆ ಅದು ನಿರ್ವಿವಾದವಾದ ಸಂಗತಿ ಇದು ಅನೇಕ ಸಾರಿ ಈ ಮಾನ್ಯ ಸಭೆಯ ಗಮನಕ್ಕೂ ಬಂದಿದೆ, ಆದರೆ ಏನು ಕಾರಣವೋ ಇದು ಎಷ್ಟು ಗಂಭೀರವಾಗಿ ಆಲೋಚನೆ ಮಾಡತಕ್ಕಂತ ವಿಷಯವಾಗಿದ್ದರೂ ಕೂಡ ಇದನ್ನು ನಮ್ಮ ಸರ್ಕಾರದವರು ಮಾಡುತ್ತಾ ಇಲ್ಲ. ಅನೇಕ ಸಾರಿ ಇದರ ಬಗ್ಗೆ ಸೂಚನೆಗಳು, ನಿರ್ಣಯಗಳು ಸರ್ಕಾರಕ್ಕೆ ಬಂದರೂ ಕೂಡ ಸರ್ಕಾರದವರು ಇದನ್ನು ವಾಪಸ್ಸು ತೆಗದುಕೊಳ್ಳಬೇಕೆಂದು ಹೇಳಿ ಸದಸ್ಯರು ವಾಪಸ್ ತೆಗೆದುಕೊಳ್ಳುತ್ತಾರೆ. ಇದು ಒಂದು ಖಾಸಗಿ ನಿರ್ಣಯವಾಗಿ ಉಳಿಯುತ್ತಾ ಬಂದಿವೆ, ವಾಸ್ತವಿಕವಾಗಿ ಇದನ್ನು ನಾವು ಗಂಭೀರವಾಗಿ ಚರ್ಚೆಮಾಡಿ ಒಂದು ತೀರ್ಮಾನ ಮಾಡಬೇಕು. ಅದು ಆಗುತ್ತಾ ಇಲ್ಲ. ಆದರೆ ಇದು ಸರ್ಕಾರದ ಖಜಾನೆಗೆ ದುಡ್ಡು ಬರತಕ್ಕಂಥ ಒಂದು ಮೂಲ ಎಂದು ಇಟ್ಟುಕೊಳ್ಳೋಣ, ಆದರೆ ಅದರಿಂದ ಸಮಾಜಕ್ಕೆ ಎಷ್ಟು ತೊಂದರೆ ಮತ್ತು ಆರೋಗ್ಯ ಎಷ್ಟು ಕೆಡುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ. ಈಗ ಪ್ರೊಹಿಬಿಷನ್ ಸರಿಯೋ ಇಲ್ಲವೋ ಎನ್ನುವುದನ್ನು ಯೋಚನೆಮಾಡುವುದಕ್ಕೆ ಮೊದಲು ಉದಾಹರಣೆಗೆ ಟಾಡಿಯನ್ನು ಹರಾಜು ಮಾಡುತ್ತಾರೆ ಆದರೆ ಹರಾಜಿನಲ್ಲಿ ತೆಗೆದುಕೊಂಡವರು ಅದನ್ನು ಹಾಗೇಯೇ ಮಾರುವುದಿಲ್ಲ ಅದನ್ನು ಹಾಗೆ ಮಾರಿದರೆ ಅವರಿಗೆ ಲಾಭ ಬರುವುದಿಲ್ಲ. ಅದಕ್ಕೆ ಕೆಮಿಕಲ್ ಪ್ರಯೋಗಮಾಡಿ ಜನಗಳಿಗೆ ಕೊಡುತ್ತಾರೆ, ಅದರಿಂದ ಏನಾಗುತ್ತದೆ ಎಂದರೆ ಜನಗಳ ಆರೋಗ್ಯ ಹಾಳಾಗುತ್ತದೆ. ಜೊತೆಗೆ ಅಧಿಕಾರಿಗಳು ಕೂಡ ಈ ಕಂಟ್ರಾಕ್ಟರ್‌ಗಳ ಜೊತೆಯಲ್ಲಿ ಹೊಂದಿಕೊಂಡು ಜನರನ್ನು ಹಾಳು ಮಾಡುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಮೊನ್ನೆ ಮೊನ್ನೆ ಕೆಲವರು ದೂರು ತಂದಿದ್ದರು. ಯಾರಾದರೂ ಇದರ ಬಗ್ಗೆ ಅಧಿಕಾರಿಗಳಲ್ಲಿ ದೂರು ಕೊಟ್ಟರೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳುವುದಿಲ್ಲವೆಂದು ಅಂತಹ ಒಂದು ವಾತಾವರಣ ಸೃಷ್ಟಿಯಾಗಿದೆ. ಅದನ್ನು ಅಧಿಕಾರಿಗಳು ಮತ್ತು ಕಂಟ್ರಾಕ್ಟರ್‌ಗಳು ಸೇರಿ ಈ ರೀತಿ ಮಾಡಿಕೊಂಡಿದ್ದಾರೆ. ಇನ್ನು ಕೆಲವು ಬ್ರೀವರೀಸ್ ಬೀರ್ ತಯಾರು ಮಾಡುತ್ತಾರಲ್ಲ ಅದು ತಮಗೆ ಗೊತ್ತಿರಬಹುದು ಒಂದು ಬಾಟಲು ಬೀರ್ ತಯಾರು ಮಾಡಲು 50 ಪೈಸೆ ವೆಚ್ಚದಲ್ಲಿ ತಯಾರುಮಾಡಲು ಸಾಧ್ಯ. ಖಾಸಗಿ ವ್ಯಕ್ತಿಗಳು ಏನು ಇದ್ದಾರೆ ಅವರು ಸುಲಭವಾಗಿ ಹಣ

ಮಾಡುವುದಕ್ಕೆ ಇದು ಸಹಾಯಕವಾಗಿದೆ. ಬರೀ ಇದರಲ್ಲಿ ಹಣ ಸಂಪಾದನೆ ಮಾಡುವುದಿಲ್ಲ. ನಮ್ಮ ಬೆಂಗಳೂರಿನಲ್ಲಿ ಒಂದೊಂದು ಕಂಪನಿಯವರು ಇದರಿಂದ ಸುಮಾರು 25 ಸಾವಿರ ರೂಪಾಯಿ ಬ್ಲಾಕ್‌ಮನಿ ಮಾಡುತ್ತಾರೆ ಅದು ಒಂದು ದಿನಕ್ಕೆ. ಇದರ ಬಗ್ಗೆ ನಿಮಗೆ ಏನಾದರೂ ಅನುಮಾನವಿದ್ದರೆ ಸರ್ಕಾರ ನನಗೆ ಅಧಿಕಾರ ಕೊಟ್ಟರೆ ಅದನ್ನು ಪತ್ತೆ ಹಚ್ಚಿ ಸರ್ಕಾರಕ್ಕೆ ವರದಿ ಕೊಡುತ್ತೇನೆ. ಅದರಲ್ಲಿ ಏನು ನಡೆಯುತ್ತಿದೆ ಎಂದು ನನಗೆ ಗೊತ್ತಿದೆ ಆದ್ದರಿಂದ ನೀವು ಸ್ವಲ್ಪ ಶ್ರದ್ಧೆ ವಹಿಸಿದರೆ ಸರ್ಕಾರಕ್ಕೆ ಎಷ್ಟೋ ಹಣ ಬರುತ್ತದೆ ಆದ್ದರಿಂದ ಸರ್ಕಾರದವರು ಇದರ ಕಡೆಗೆ ಗಮನಕೊಡಬೇಕೆಂದು ಹೇಳುತ್ತೇನೆ. ಎಷ್ಟೋ ಬಾಬುಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಆದ್ದರಿಂದ ಈ ಬ್ರಿವರೀಸ್‌ನ್ನು ಏತಕ್ಕೆ ರಾಷ್ಟ್ರೀಕರಣ ಮಾಡಬಾರದು ಇದರಲ್ಲಿ ನೂರಕ್ಕೆ ಸಾವಿರಪಟ್ಟು ಲಾಭವಿರುವ ಉದ್ಯಮ ಎನ್ನತಕ್ಕಂಥಾದ್ದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆಂದು ನಾನು ಹೇಳವುದಕ್ಕೆ ಇಷ್ಟಪಡುತ್ತೇನೆ. ಅರಕ್ ಮತ್ತು ಟಾಡಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಿಬಿಡಿ. ಸಾಮಾನ್ಯವಾಗಿ ಒಂದು ಬಾಟಲಿಗೆ ಹೆಚ್ಚು ಎಂದರೆ ಒಂದು ರೂಪಾಯಿ ಖರ್ಚಾಗಬಹುದು. ಸದ್ಯಕ್ಕೆ ಇದನ್ನು ರಾಷ್ಟ್ರೀಕರಣ ಮಾಡಿದರೆ ಇದರ ಸ್ಥಿತಿ ಗೊತ್ತಾಗುತ್ತದೆಂದು ಸೂಚನೆಕೊಟ್ಟು ಶ್ರೀಮಾನ್ ಪ್ರಭಾಕರ್‌ರವರು ತಂದಿರತಕ್ಕ ನಿರ್ಣಯವನ್ನು ಸುಮ್ಮನೆ ವಾಪಸ್ ತೆಗೆದುಕೊಳ್ಳಿ ಎಂದು ಹೇಳಿ ಸರ್ಕಾರದವರು ಇದನ್ನು ಲಘುವಾಗಿ ಪರಿಗಣಿಸದೆ ಅಮೂಲಾಗ್ರವಾಗಿ ಯೋಚಿಸಬೇಕೆಂದು ಹೇಳುತ್ತೇನೆ. ತತ್ರಾಪಿ ಪ್ರಜಾಸತ್ತೆ ಹೊಂದುಳಿದ ರಾಷ್ಟ್ರದಲ್ಲಿ ಇದು ಇರಬಾರದು. ಅದರಲ್ಲೂ ಚುನಾವಣೆ ಕಾಲದಲ್ಲಿ ಮರ್ಯಾದೆಯಸ್ಥರು ರಸ್ತೆಯಲ್ಲಿ ತಿರುಗಾಡುವಂತಿಲ್ಲ. ಆದ್ದರಿಂದ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿ ಈ ನಿರ್ಣಯವನ್ನು ಸಮರ್ಥನೆ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಕೆ. ಪ್ರಭಾಕರ್‌ರವರು ತಂದಿರತಕ್ಕಂಥ ಪಾನನಿರೋಧದ ಖಾಸಗಿ ನಿರ್ಣಯವನ್ನು ಸಮರ್ಥಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಮೊದಲು ಈಗ ತಾನೆ ಮಾತನಾಡಿ ಮುಗಿಸಿದಂತಹ ಮಾನ್ಯ ನಂಜೇಗೌಡರವರ ಮತ್ತು ಸಲಹೆಗಳ ಬಗ್ಗೆ ನನ್ನ ಸಹಮತ ವ್ಯಕ್ತಪಡಿಸುವುದರ ಜೊತೆಗೆ ಅವರು ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆಂದು ಭಾವಿಸುತ್ತೇನೆ. ಆದ್ದರಿಂದ ಈ ಬ್ರೀವರೀಸ್‌ನ್ನು ರಾಷ್ಟ್ರೀಕರಣ ಮಾಡುವ ಚಿಂತನೆಯನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತೇನೆ. ಮೊನ್ನೆ ತಾನೇ ಬ್ಯಾಂಕುಗಳ ರಾಷ್ಟ್ರೀಕರಣವನ್ನು ಅಹೋರಾತ್ರಿ ಮಾಡಿದ ರೀತಿಯಲ್ಲಿ ಇದನ್ನು ಮಾಡಿದರೆ ಸರ್ಕಾರಕ್ಕೆ ಬಹಳ ಪ್ರಯೋಜನವಾಗುತ್ತದೆ. ಆದುದರಿಂದ ಶ್ರೀಮಾನ್ ನಂಜೇಗೌಡರು ಕೊಟ್ಟ ಸಲಹೆಗಳನ್ನು ಅಂಗೀಕರಿಸಿ ಅದರಿಂದ ಬಡಬಗ್ಗರಿಗೆ ಹೆಚ್ಚಿನ ಉಪಕಾರವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಈ ನಿರ್ಣಯದ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಯಾರಿಗೂ ಪ್ರಾಮಾಣಿಕವಾದ ಕಳಕಳಿಯಿದೆ ಅವರೆಲ್ಲರೂ ಅಂದರೆ ಆಳುವ ಪಕ್ಷದಲ್ಲಿರತಕ್ಕಂಥ ಸದಸ್ಯರೆಲ್ಲರೂ ಒಂದಾಗಿ ಒಗ್ಗಟ್ಟಿನಿಂದ, ಸಂಘಟನೆಯಿಂದ ಇದಕ್ಕೆ ಸರಿಯಾದ ಮಾರ್ಗವನ್ನು ಕಂಡುಕೊಳ್ಳಬೇಕೆಂದು ಹೇಳುತ್ತೇನೆ ಯಾರಿಗೆ ಬಹು ಜನರ ಹಿತರಕ್ಷಣೆ ಮಾಡುವುದಕ್ಕೆ ಆಸಕ್ತಿಯಿದೆಯೋ ಅಂಥವರು ಸರ್ಕಾರದ ಖಚಿತವಾದ ನಿಲುವನ್ನು ಏನು ಎಂದು ತಿಳಿಸಬೇಕು. ಕೇವಲ ೫೦ ಕೋಟಿ ರೂಪಾಯಿ ಸಂಪಾದನೆ ಇದೆ ಎನ್ನುವ ಕಾರಣಕ್ಕೋಸ್ಕರ ಇದನ್ನು ಜಾರಿಯಲ್ಲಿ ಇಡುವುದಾದರೆ ನಿಜವಾಗಿ ಹೇಳಬೇಕೆಂದರೆ ಬರೀ ಹಣ ಸಂಪಾದನೆ ಮಾಡುವುದಕ್ಕೆ ಇದು ಒಂದು ದಾರಿಯಲ್ಲ. ಅದಕ್ಕೆ ಬೇಕಾದಷ್ಟು ಮಾರ್ಗಗಳನ್ನು ಹುಡುಕಬಹುದು. ಆದರೆ ಈ ಸದನದಲ್ಲಿ ನಾನು ಆ ಮಾರ್ಗಗಳ ಬಗ್ಗೆ ತಿಳಿಸುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ರೀತಿಯಿಂದ ಸಂಪಾದನೆ ಮಾಡತಕ್ಕಂಥ ಗುರಿಯನ್ನು ಸರ್ಕಾರ ಇಟ್ಟುಕೊಂಡು ಸಾರ್ವಜನಿಕರ ಹಿತವನ್ನು ರಾಜ್ಯದ ಹಿತವನ್ನು ಮತ್ತು ಆದರ್ಶವನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ವಿಚಾರಮಾಡಬೇಕೆಂದು ಹೇಳುತ್ತೇನೆ.

ಮುಂದೆ ನೀವು ಯಾವ ಗುರಿಯನ್ನಿಟ್ಟುಕೊಂಡು ಹೋಗಬೇಕು ಎನ್ನುವ ಬಗ್ಗೆ ಆದರ್ಶದ ಗುರಿಯನ್ನು ಇಟ್ಟುಕೊಂಡಿದ್ದೀರಿ. ಆ ಆದರ್ಶಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಒಂದೊಂದು ಹೆಜ್ಜೆ ಹೆಜ್ಜೆಯಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮಹಾತ್ಮಾಗಾಂಧಿ ಎನ್ನತಕ್ಕಂಥ ಶಬ್ದ, ಮಹಾತ್ಮಾ ಗಾಂಧಿಜಿಯವರು ಹೇಳಿದಂಥ ಮಾತುಗಳು ಇವತ್ತು ಇವರಿಗೆ ಹಳೆಯ ಮಾತುಗಳಾಗಿವೆ. ಅವರಿಗೆಲ್ಲಾ ಪಾಪ ಬೇರೆ ಹೆಸರೇ ಬಹಳ ಅಪ್ರಾಯಮಾನವಾಗಿದೆ. ಆದುದರಿಂದ ಅವರ ಬಗ್ಗೆ ನಾವು ಟೀಕೆ ಮಾಡುವುದಕ್ಕೆ, ಅವರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

11-30 P. M.

ಉಪಾಧ್ಯಕ್ಷರು.— ಮಹಾತ್ಮಾಗಾಂಧೀಜಿಯವರ ಕಾಲಕ್ಕಿಂತಲೂ ಮುಂಚೆ ಬುದ್ಧ, ಜೈನರ ಕಾಲದಲ್ಲೂ ಇದು ಕುಡಿಯುವುದು ಇತ್ತು.

ಶ್ರೀ ಕೋಣಂದೂರು ಲಿಂಗಪ್ಪ.—ಹೌದು ಸ್ವಾಮಿ, ಈ ಸುರಾಪಾನ ಎನ್ನತಕ್ಕಂಥದ್ದು ಪುರಾಣ ಕಾಲದಿಂದಲೂ ಬಂದಿರತಕ್ಕಂಥದ್ದು. ಮಾನ್ಯ ಶ್ರೀ ನಂಜೇಗೌಡರವರು ಹೇಳಿದ ಹಾಗೆ ಯಾರು ಶ್ರೀಮಂತರಿದ್ದಾರೆ, ಅವರು ಏನು ಬೇಕಾದರೂ ಮಾಡಿಕೊಳ್ಳಲಿ, ೫ ನೂರು ರೂಪಾಯಿಯ ಬಾಟ್ಲಿ ಎಂದು ಇಡಲಿ, ಅವರು ಬೇಕಾದರೆ ಕುಡಿಯಲಿ. ಆದುದರಿಂದ ಈ ಸಾರಾಯಿ ಹೆಂಡ ಎನ್ನತಕ್ಕಂತಾದ್ದು ಏನಿದೆ, ಬಡ ಜನರು ಉಪಯೋಗಿಸತಕ್ಕಂಥದ್ದು ಅದನ್ನು ಮೊದಲು ಬಂದ್ ಮಾಡಿದರೆ ಬಹುಶಃ ಸಾವಿರಾರು, ಲಕ್ಷಾಂತರ ಕುಟುಂಬಗಳು ಉದ್ಧಾರವಾಗುತ್ತದೆ. ಹಿಂದಿನ ಸರ್ಕಾರ ಇದನ್ನು ಅಭಿವೃದ್ಧಿಗೊಳಿಸದೇ ದೊಡ್ಡ ಪಾಪ ಮಾಡಿದ್ದರು. ಇದರಿಂದ ಆ ಪಕ್ಷ ಹೊರಟು ಹೋಯಿತು. ಮತ್ತು ನೀವು ಅದೇ ಕೆಲಸವನ್ನು ಮಾಡುತ್ತಿದ್ದೀರಿ, ಅದೇ ಪಾಪದ ಬುಟ್ಟಿಯನ್ನು ತಲೆಯ ಮೇಲೆ ಇಟ್ಟುಕೊಂಡು ಸಾಗುತ್ತಿದ್ದೀರಿ. ಇದರಿಂದ ಮುಂದೆ ಮತ್ತೇ ಚುನಾವಣೆಗಳು ನಡೆದರೆ ಹಿಂದಿನ ಸರ್ಕಾರದ ಗತಿ ಏನಾಯಿತೋ ಅದೇ ಗತಿ ನಿಮಗೂ ಆಗುತ್ತದೆ. ಇವತ್ತು ಹಳ್ಳಿಹಳ್ಳಿಗಳಲ್ಲಿ ಲಕ್ಷೋಪಲಕ್ಷ ಬಡ ಸಂಸಾರಗಳು ಅದರಲ್ಲೂ ಮಹಿಳೆಯರೂ ಮಕ್ಕಳು ಶಾಪ ಹಾಕುತ್ತಿದ್ದಾರೆ. ಇದನ್ನು ಹಳ್ಳಿಹಳ್ಳಿಗೂ ತಂದು ನಮಗೆ ಎರಡು ಹೊತ್ತು ಊಟಕ್ಕೂ ಗತಿ ಇಲ್ಲದ ಹಾಗೆ ಮಾಡಿದ್ದಾರೆಂದು ಶಾಪ ಹಾಕುತ್ತಿದ್ದಾರೆ. ಇದನ್ನು ರದ್ದು ಪಡಿಸುವುದಕ್ಕೆ ನಿಮಗೆ ಏನು ಆಗಿದೆ ? ಏತಕ್ಕೆ ನೀವು ರದ್ದು ಪಡಿಸಬಾರದೆಂದು ನಾನು ಕೇಳುತ್ತೇನೆ. ಆದುದರಿಂದ ಇವತ್ತು ನೀವು ಅದರ ಶಾಪದ ಫಲ ಏನಿದೆ ಅದನ್ನು ಅನುಭವಿಸತಕ್ಕವರು ನೀವು ಎನ್ನುವುದನ್ನು ಮರೆಯಬಾರದು. ತಾವು ಒಂದು ಮಾತನ್ನು ಪದೇ ಪದೇ ಹೇಳುತ್ತಿರುತ್ತೀರಿ, ಬಡತನ ತೊಲಗಿಸಿ, ಗರೀಬೀ ಹಟಾವೋ ಎಂದು ಹೇಳುತ್ತೀರಿ, ಬರೀ ಇದೆಲ್ಲಾ ಘೋಷಣೆಯಾಗುತ್ತಿದೆ. ಪಾನ ನಿರೋಧವನ್ನು ಜಾರಿಗೆ ತಂದರೆ ಕನಿಷ್ಟ ೧೦೦ಕ್ಕೆ ೨೦ ರಷ್ಟು ಜನ ಯಾರು ಬಡತನದ ಗೆರೆಯ ಕೆಳಗಡೆ ಇದ್ದಾರೋ ಅಂಥ ಜನ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಅವನು ಸಂಬಳವನ್ನು ತೆಗೆದುಕೊಂಡು ಮನೆಗೆ ಹೋಗುವುದಿಲ್ಲ. ಅವನ ಮನೆಗೆ ತೆಗೆದುಕೊಂಡು ಹೋಗಲು ಹಣ ಉಳಿಯುವುದೇ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩-೪ ರೂಪಾಯಿಗಳ ಕೂಲಿ ನಿಮ್ಮ ಕಾನೂನು ಪ್ರಕಾರ, ಲೇಬರ್ ಆಕ್ಟ್ ಪ್ರಕಾರ ೬ ರೂಪಾಯಿ ಕೊಡಬೇಕೆಂದು ಅದು ನಿಮ್ಮ ಹತ್ತಿರ ಮಾತ್ರ ಇದೆ. ಆದರೆ ನಮ್ಮ ಕಡೆಯಲ್ಲಾ ೩-೪ ರೂಪಾಯಿಗಳ ಕೂಲಿಯನ್ನೇ ಕೊಡುತ್ತಿದ್ದಾರೆ. ಇದೆಲ್ಲಾ ಬರೀ ಪತ್ರಿಕೆಗಳಲ್ಲಿಯೇ ಇದೆ. ಅದು ಇನ್ನೂ ಕಾರ್ಯಗತವಾಗಿಲ್ಲ. ೩-೪ ರೂಪಾಯಿಗಳ ಕೂಲಿಯನ್ನು ತೆಗೆದುಕೊಂಡಂಥವರು ಮನೆಗೆ ಹೋಗುವಷ್ಟು ಹೊತ್ತಿಗೆ ಅವರ ಕೈಯಲ್ಲಿ ಹಣವೇ ಉಳಿದಿರುವುದಿಲ್ಲ, ಎಲ್ಲಾ ಮುಗಿದು ಹೋಗಿರುತ್ತದೆ. ಯಾವ ಯಾವ ಸಾಹೇಬರರವರಿಗೆ ಕಾಣಿಕೆಯನ್ನು ಅರ್ಪಣೆ ಮಾಡಬೇಕೋ ಮಾಡಿಬಿಟ್ಟು ಮನೆಗೆ ಹೊರಟು ಹೋಗುತ್ತಾನೆ. ಅವರ ಮನೆಯ ಮಕ್ಕಳ ಉಪವಾಸದ ಗೋಳನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಇವತ್ತು ನೀವು ಬಡ ಜನತೆಯನ್ನು ಮೇಲಕ್ಕೆ ತರಬೇಕು ಎನ್ನುವ ಹಾಗಿದ್ದರೆ ಪಾನನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಇದಲ್ಲ ಬೇಕೆಂದು ಹೇಳುವುದಾದರೆ ದೆಹಲಿಯಲ್ಲಿ ಇಟ್ಟಿದ್ದೀರಲ್ಲಾ ಹಾಗೆ ಇಡಿ. ಯಾರು ಬೇಕಾದರೂ ಮನೆಗೆ ತೆಗೆದುಕೊಂಡು ಹೋಗಿ ಕುಡಿಯಲು ವ್ಯವಸ್ಥೆ ಮಾಡಿ. ಈ ಬಾರ್‌ಗಳು, ಕಾರ್‌ಗಳು ಏತಕ್ಕೆ ಬೇಕು ಸ್ವಾಮಿ ? ಇವತ್ತು ಹಳ್ಳಿಹಳ್ಳಿಗಳಲ್ಲೂ ಸಾರಾಯಿ ಅಂಗಡಿಗಳು, ಸೇಂದಿ ಅಂಗಡಿಗಳು ಆಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಹೋಗಿದ್ದ, ಮಂಗಳೂರು ಜಿಲ್ಲೆಯಲ್ಲಿ ಎಲ್ಲಿ ನೋಡಿದರೂ ದೊಡ್ಡದೊಡ್ಡ ಬೋರ್ಡ್‌ಗಳು ಇವೆ ಅವು ಎಂಥಾ ಬೋರ್ಡ್‌ಗಳು ಎಂದರೆ ಸೇಂದಿ ಅಂಗಡಿಗಳು, ಸಾರಾಯಿ ಅಂಗಡಿಯ ಬೋರ್ಡ್‌ಗಳೇ ಕಾಣುತ್ತಿವೆ. ಇವತ್ತು ಮಂಗಳೂರಿನಲ್ಲಿರತಕ್ಕಂಥ ಬಟ್ಟೆಯ ಅಂಗಡಿ, ಬೆತ್ತಂಗಡಿಗಳ ಜೊತೆಗೆ ಈ ಸೇಂದಿ ಅಂಗಡಿ, ಸಾರಾಯಿಂಗಳ ಬೋರ್ಡ್‌ಗಳು ಸೇರಿ ಹೋಗಿರುವುದರಿಂದ, ನಾವು ಊರು ಯಾವುದು ಎಂದು ಕೇಳಬೇಕಾದಂಥ ಪ್ರಸಂಗ ಬಂದು ಬಿಟ್ಟಿದೆ.

ಉಪಾಧ್ಯಕ್ಷರು.—ಆ ಬೋರ್ಡ್‌ಗಳನ್ನು ಅಷ್ಟು ಭವ್ಯವಾಗಿ ಬರೆದು ಬಿಟ್ಟಿರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ಹೌದು ಸ್ವಾಮಿ, ಅದರಿಂದ ಆ ಊರಿನ ಹೆಸರು ಯಾವುದು ಎಂಬುದೇ ಗೊತ್ತಾಗುವುದಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೇ, ಇವತ್ತು ಹಳ್ಳಿಗಳಲ್ಲಿ ಏನು ಬಡವರು ಬಡತನದ ಗೆರೆಯ ಕೆಳಗಡೆ ಏನಿದ್ದಾರೆ ಅಂಥ ಜನಗಳನ್ನು ಮೇಲಕ್ಕೆ ತರಬೇಕಾದರೆ ಅದಕ್ಕೆ ಪೂರಕವಾದಂಥ ಕೆಲಸಗಳನ್ನು ತಾವು ಮಾಡಬೇಕಾಗುತ್ತದೆಂದು ಹೇಳಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಟೆಂಪರೆನ್ಸ್ ಬೋರ್ಡ್ ಎಂದು ಇದೆ. ಒಂದು ಪ್ರಶ್ನೆಯನ್ನು ಇದರ ಬಗ್ಗೆ ಕೇಳುಹಿಸು ತ್ತಿದ್ದೇನೆ. ಒಟ್ಟು ನಮ್ಮ ಸರ್ಕಾರದವರು ಎಷ್ಟು ಬೋರ್ಡ್‌ಗಳನ್ನು ರಚಿಸಿದ್ದಾರೆ? ಮತ್ತು ಎಷ್ಟು ಜನ ಚೇರ‍ಮನ್‌ಗಳು ಮತ್ತು ಕುರ್ಚಿಗಳು ಇದ್ದಾರೆ ? ಎನ್ನುವ ಬಗ್ಗೆ ಒಂದು ಪ್ರಶ್ನೆಯನ್ನು ನಾವು ಹಾಕು ತ್ತಿದ್ದೇನೆ ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಶಾದದ ಸಂಗತಿ ಅಂತ ಹೇಳಿದರೆ, 20 ಅಂಶದ ಕಾರ್ಯ ಕ್ರಮದಲ್ಲಿ ಈ ಪಾನನಿರೋಧವನ್ನು ಏತಕ್ಕೆ ತಂದಿಲ್ಲ ? 20 ಅಂಶದ ಸಂಶಯ ಗಾಂಧಿಯವರ ಕಾರ್ಯ ಕ್ರಮ ನಮಗೆ ಗೊತ್ತಿದೆ. ಆದರೆ ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮದಲ್ಲಿ ಈ ಪಾನ ನಿರೋಧದ ಬಗ್ಗೆ ಏತಕ್ಕೆ ಸೇರಿಸಿಲ್ಲ ? ಎಂದು ನಾನು ಕೇಳುತ್ತಿದ್ದೇನೆ. 100ಕ್ಕೆ 85 ಜನ ಬಡವರು ಯಾರಿದ್ದಾರೆ ಅವರನ್ನು ಕೊಲೆ ಮಾಡುವುದಕ್ಕೆ, ಅವರ ಬದುಕಿನ ಮೇಲೆ ತಾಂಡವ ನೃತ್ಯವನ್ನು ಆಡಿ ರಾಕ್ಷಸೀ ಕೃತ್ಯವನ್ನು ಮಾಡುತ್ತಿದ್ದೀರಿ ಎಂದು ನಾನು ಹೇಳಬೇಕಾಗಿದೆ. ಇವತ್ತು ನಿಮಗೆ ಬಡವರ ಬಗ್ಗೆ ಮತ್ತು ಹಿಂದುಳಿದವರ ಬಗ್ಗೆ, ಬಡತನದ ಗೆರೆಯ ಕೆಳಗಡೆ ಇರತಕ್ಕಂಥವರ ಬಗ್ಗೆ ಕಳಕಳಿ ಇದ್ದಿದ್ದರೆ 20 ಅಂಶದ ಕಾರ್ಯಕ್ರಮದಲ್ಲಿ ಇದನ್ನು ಒಂದು ಕಾರ್ಯಕ್ರಮವನ್ನಾಗಿ ಸೇರಿಸಬೇಕಾಗಿತ್ತು ಎಂದು ನಾನು ಹೇಳುತ್ತೇನೆ ಇವತ್ತು ನೀವು 20 ಅಂಶದ ಕಾರ್ಯಕ್ರಮವನ್ನು ರಾಷ್ಟ್ರೀಯ ವ್ಯಾಪ್ತಿ ಕಾರ್ಯಕ್ರಮ ವನ್ನಾಗಿ ಜಾರಿಗೆ ತರುತ್ತಿರುವಾಗ ಈ ಪಾನ ನಿರೋಧವನ್ನು ಸಹ ರಾಷ್ಟ್ರೀಯ ವ್ಯಾಪ್ತಿ ಕಾರ್ಯಕ್ರಮ ವನ್ನಾಗಿ ಜಾರಿಗೆ ತಂದಿದ್ದರೆ ಬಡವರಿಗೆ ಜೀವಕಳೆ ಬರುತ್ತಿತ್ತು. ಹಳ್ಳಿಗಳಲ್ಲಿ ತಲೆತಲಾಂತರಗಳಿಂದ ತುಳಿ ಯಲ್ಪಟ್ಟಂಥ ಜನ, ತಲೆಬಾಗಿರತಕ್ಕಂಥ ಜನ ತಲೆ ಎತ್ತಿ ನಿಲ್ಲಲು ಅವರಿಗೆ ಅದರಿಂದ ಸಾಧ್ಯವಾಗುತ್ತಿತ್ತು. ಆದರೆ ನಿಮಗೆ ಬೇಕಾಗಿರತಕ್ಕಂಥದ್ದು ಮೇಲ್ಗಡೆ ಇರತಕ್ಕಂಥ ಜನ ಸುಖವಾಗಿರಬೇಕು. ಇವತ್ತು 75 ದೊಡ್ಡ ಕುಟುಂಬಗಳು ರಾಷ್ಟ್ರದಲ್ಲಿವೆ ಆ ಕುಟುಂಬಗಳನ್ನು ಮುಟ್ಟುವುದಕ್ಕೆ ನಿಮಗೆ ತಾಕತ್ತು ಇಲ್ಲ. ಇವತ್ತು ನೀವು 20 ಅಂಶದ ಕಾರ್ಯಕ್ರಮವೆಂದು ಹೇಳುತ್ತೀರಿ, ಆದರೆ ಈ ಪಾನ ನಿರೋಧವನ್ನು ಏತಕ್ಕೆ ಅಳವಡಿಸಿಲ್ಲವೆಂದು ಕೇಳುತ್ತಿದ್ದೇನೆ. ನಿಮ್ಮ ಪ್ರಧಾನ ಮಂತ್ರಿಯವರಿಗೆ, ನಿಮ್ಮ ಕೇಂದ್ರ ಸರ್ಕಾರಕ್ಕೆ ಬಡವರ ಬಗ್ಗೆ ಕಾಳಜಿ ಇಲ್ಲ, ಸೂಜಿ ಮೊನೆಯಷ್ಟೂ ಕೂಡ ಬಡವರ ಬಗ್ಗೆ ಅವರನ್ನು ಉದ್ಧಾರ ಮಾಡುವ ಮನಸ್ಸು ಇಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮಗಿಂತ ನಮಗೆ ಬಡವರ ಬಗ್ಗೆ ಕಳಕಳಿ ಉದಾರ ಮನಸ್ಸು ಇದೆ ಎಂದು ಹೇಳುತ್ತಿದ್ದೇನೆ. ನಾನಂತೂ ವೈಯುಕ್ತಿಕವಾಗಿ ಹೇಳು ವುದಾದರೆ, ನಾನು ಬಂದಿರುವುದೇ ಬಡನಿಂದ ಬಂದಿರುವುದು, ಆದುದರಿಂದ ಬಡದಲ್ಲಿರತಕ್ಕಂಥವರ ಬಗ್ಗೆ ಪ್ರಾಮಾಣಿಕವಾದ ಕಳಕಳಿ ಸ್ವಾಭಾವಿಕವಾಗಿ ಇದ್ದೇ ಇದೆ ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ವಿಲ್ಲ. ಇವತ್ತು ನೀವು ಬರೀ ಪ್ರಚಾರವನ್ನು ಮಾಡಿ, ಭಾರಿ ಭಾರಿ ಮೆರವಣಿಗೆಗಳನ್ನು ಮಾಡಿ ಪ್ರತಿದಿನ ಆಕಾಶವಾಣಿಯಿಂದ 20 ಅಂಶದ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತಿದ್ದೀರಿ, ಆದರೆ ಇದೆಲ್ಲದರಲ್ಲೂ ಕೂಡ ಪಾನ ನಿರೋಧದ ಬಗ್ಗೆ ಒಂದು ಚಕಾರ್ ಶಬ್ದವೂ ಕೂಡ ಎತ್ತುತ್ತಾ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯಿಡು (ಶಾಂತಿನಗರ).— ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ಮಿತ್ರರಾದ ಶ್ರೀ ಪ್ರಭಾಕರ್ ಅವರು ತಂದಿರುವ ಖಾಸಗೀ ನಿರ್ಣಯ-ರಾಜ್ಯದಲ್ಲಿ ಸಂಪೂ ರ್ಣವಾಗಿ ಪಾನನಿರೋಧವನ್ನು ಜಾರಿಗೆ ಗೊಳಿಸಬೇಕು-ನಾನೂ ಅವರ ಸಹ ಅಭಿಪ್ರಾಯಕ್ಕೆ ದನಿಗೂಡಿಸುತ್ತೇನೆ ನಮ್ಮ ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆನ್ನುವುದು ಅಕ್ಷರಶಃ ನಿಜ ; ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಇದನ್ನು ಕಾರ್ಯರೂಪಕ್ಕೆ ತರುವಾಗ ಉದ್ಭವ ವಾಗುವ ಹಲವಾರು ಲೋಪದೋಷಗಳನ್ನೂ ನಾವು ಮುಖ್ಯವಾಗಿ ಯೋಚನೆ ಮಾಡಬೇಕು. ಅನಾದಿಕಾಲದಿಂದಲೂ ಅಂದರೆ ಪಾಂಡವರ ಕಾಲದಿಂದಲೂ ಶ್ರೀರಾಮನ ಕಾಲದಿಂದಲೂ ''ಸುರಾ ಪಾನವಿತ್ತು'' ಆದರೆ ಅಂದಿಗೂ ಇಂದಿಗೂ ವಾತಾವರಣದಲ್ಲಿ ಬಹು ವ್ಯತ್ಯಾಸವಾಗಿದೆ. ಅಂದು ಸುರಾಪಾನ ಮಾಡಿದರೂ ಸಹ ಈಗ ಆಗುತ್ತಿರುವಷ್ಟು ಅನಾಹುತಗಳಾಗುತ್ತಿರಲಿಲ್ಲ ಸುರಾಪಾನ ಮಾಡಲಿಕ್ಕೆ ಅಂದು ಒಂದು ಮಿತಿಯಿತ್ತು, ಮದ್ಯಪಾನ ಮಾಡುವುದನ್ನು ಹಿಂದಿನ ಸರ್ಕಾರ ಜಾರಿಗೆ ತಂದು ನಮಗೆ ನೀಡಿದ ವರಪ್ರಸಾದ ಇದು ನಮ್ಮ ಪ್ರಸಾದವಲ್ಲ. ಹಿಂದಿನವರು ತಂದಿ ಟ್ಟಿದ್ದು ಇಂದು ಬೆಳೆಯುತ್ತಾ ಹೋಗಿದೆ. ಮಾನ್ಯ ಶ್ರೀ ಯಾಹ್ಯ ಅವರು ಮಾತನಾಡುತ್ತಾ ನನ್ನ ಗೊಂದು ಪರ್ಯಾಯ ಆದಾಯವನ್ನು ತೋರಿಸಿ ಸರ್ಕಾರಕ್ಕೆ ಇದರಿಂದ ನಮಗೆ 50ಕೋಟಿ ರೂಪಾಯಿ ಗಳಷ್ಟು ಆದಾಯ ಬರುತ್ತಿದೆ ನನಗೂ ಬಡ ಜನತೆಯ ಮೇಲೆ ಅಷ್ಟೇ ವಿಶ್ವಾಸವಿದೆ, ನಂಬಿಕೆ ಇದೆ; ಬಡ ಜನತೆ ನೊಂದ ಜನತೆ ಹಿಂದುಳಿದ ಜನತೆ ಇಂದು ಮದ್ಯಪಾನ ಮಾಡುತ್ತಿದ್ದಾರೆ ಅದನ್ನು ತಪ್ಪಿಸುವುದೇನು ಕಷ್ಟವಲ್ಲ ಆದರೆ ನನಗೊಂದು ಪರ್ಯಾಯ ಆದಾಯ ಮೂಲವನ್ನು ಹೇಳಿ ಎಂದು ಸೂಚಿಸಿದರು. ನಾನು ಅವರಿಗೆ ಸಲಹೆ ಕೊಡುತ್ತೇನೆ ಮದ್ಯಪಾನ ಜಾಸ್ತಿಯಾಗಿರುವುದಕ್ಕೆಲ್ಲಾ

ಕಾರಣ The hapazard policy of the Government in Execution ಅಂದರೆ ಒಂದು ಜಿಲ್ಲೆಯಲ್ಲಿ ಜಾರಿಗೆ ತರುವುದು ಮತ್ತೊಂದು ಜಿಲ್ಲೆಯಲ್ಲಿ ಜಾರಿಗೆ ತರದಿರುವುದು ಒಂದು ತಾಲ್ಲೂಕಿಗೆ ಜಾರಿಗೆ ತರುವುದು ಮತ್ತೊಂದು ತಾಲ್ಲೂಕ್‌ಗೆ ಜಾರಿಗೆ ತರದಿರುವುದು ಇದು ಮುಖ್ಯಕಾರಣ ವಾಯಿತು. ಇದರಿಂದ ಅಫಿಷಿಯಲ್ಸ್ ಕೂಡ ಯಾವ ರೀತಿ ನಡೆದು ಕೊಳ್ಳಬೇಕೆಂಬ ವಿವರಣೆಯು ಸಿಕ್ಕುತ್ತಿರಲಿಲ್ಲ. ಅದಕ್ಕಾಗಿ ಪಾನನಿರೋಧ ವಿಫಲವಾಯಿತು ಆದರೆ ಪಾನನಿರೋಧ ಕೆಟ್ಟದ್ದು ಎಂದು ಯಾರೂ ಹೇಳುವುದಿಲ್ಲ. ನಾವು ಗಾಂಧೀಜಿ ದೇಶದವರು ಕಾಂಗ್ರೆಸ್ಸಿನವರು. ಮಹಾತ್ಮ ಗಾಂಧೀಜಿಯವರು ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಎಷ್ಟು ಕಷ್ಟಪಟ್ಟರು? ಹೇಗೆ ಅವರು ತಮ್ಮ ಆದರ್ಶ ಜೀವನವನ್ನು ಜಗತ್ತಿಗೆ ತೋರಿಸಿದರು ಪಾನನಿರೋಧಕ್ಕಾಗಿ ಎಷ್ಟು ಚಳವಳಿ ಮಾಡಿದರು ಚಳವಳಿ ಮಾಡುವಾಗ ಅವರು ಲಾಟಿ ಏಟುಗಳನ್ನೂ ತಿಂದರು. ಇವೆಲ್ಲಾ ಹಿಂದಿನ ಚರಿತ್ರೆ. ಇದನ್ನೆಲ್ಲಾ ನಾವು ಜ್ಞಾಪಿಸಿಕೊಂಡಾಗ ಪೂಜ್ಯ ಗಾಂಧೀಜಿಯವರು ಪಾನನಿರೋಧದ ಬಗ್ಗೆ ಎಷ್ಟು ಆಸಕ್ತಿಯನ್ನಿಟ್ಟುಕೊಂಡಿದ್ದರು ಎನ್ನುವುದು ಅರಿವಾಗುತ್ತದೆ. ಈಗ ಹೆಚ್ಚು ಮದ್ಯಪಾನ ಸೇವಿಸುವುದಕ್ಕೆ ಇಂದಿನ ವಾತಾವರಣವೇ ಕಾರಣ ಎಂದು ನಾನು ಹೇಳುತ್ತೇನೆ ಹಿಂದಿನ ವಾತಾವಣವೇ ಬೇರೆ ಇತ್ತು ಸಾವಿರಾರು ವರ್ಷಗಳ ಹಿಂದಿನ ವಾತಾವರಣವೇ ಬೇರೆ ಇತ್ತು. ನಮ್ಮನ್ನು ಮುಸಲ್ಮಾರು ಸುಮಾರು 600-700 ವರ್ಷಗಳ ಕಾಲ ಆಳಿದರು ಬ್ರಿಟಿಷರು ಸುಮಾರು 200 ವರ್ಷಗಳ ಕಾಲ ಆಳಿದರು. ಹೀಗಾಗಿ ನಮ್ಮ ಸಂಸ್ಕೃತಿ ಪರಕೀಯ ಪ್ರಭಾವಕ್ಕೆ ಒಳಗಾಯಿತು. ಹಿಂದಿನ ಕಾಲದಲ್ಲಿ ಈಗಿನಂತೆ ಮದ್ಯಪಾನ ಮಾಡಿ ರಸ್ತೆಯಲ್ಲಿ ಬಿದ್ದು ಒದ್ದಾಡುತ್ತಿರಲಿಲ್ಲ ಒಂದು ಮಿತಿ ಇಟ್ಟುಕೊಂಡಿದ್ದರು. ಪಾಶ್ಚಿಮಾತ್ಯರು ವಿದ್ಯಾವಂತರೂ ಬುದ್ಧಿವಂತರೂ ಜ್ಞಾನಿಗಳೂ ಪ್ರಾಪಂಚಿಕ ಜ್ಞಾನವನ್ನು ಅರಿತವರೂ ಆಗಿದ್ದರೂ. ಅವರು ನಮ್ಮಂತೆ ಬೀದಿಯಲ್ಲಿ ಕುಡಿದು ಒರಳಾಡುತ್ತಿರಲಿಲ್ಲ ಆದರೆ ನಮ್ಮಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೂ ಇನ್ನೂ ಮುವತ್ತೆರಡು ಪರ್ಸೆಂಟ್ ಜನಾಂಗ ಎಡಗೈ ಎಬ್ಬೆಟ್ಟಿನ ಗುರುತಿನವರಿದ್ದಾರೆ ಅಷ್ಟು ಬಡವರಿದ್ದಾರೆ. ಇದಕ್ಕೆ ಮುಖ್ಯ ಕಾರಣ The hapazard policy of the Government ನಮ್ಮಲ್ಲಿ ಅಷ್ಟ ಲಕ್ಷ್ಮಿಗಳೆಂದು ದೇವರನ್ನು ಪೂಜಿಸುತ್ತೇವೆ. ಧೈರ್ಯಲಕ್ಷ್ಮಿ ಜಯಲಕ್ಷ್ಮಿ ಸುರಾಲಕ್ಷ್ಮಿ ವನಲಕ್ಷ್ಮಿ ಗನಲಕ್ಷ್ಮಿ ದಾನ್ಯಲಕ್ಷ್ಮಿ ವಿಜಯಲಕ್ಷ್ಮಿ ಮತ್ತು ದರಿದ್ರಲಕ್ಷ್ಮಿ.

ಶ್ರೀ ಕೋಣಂದೂರು ಲಿಂಗಪ್ಪ.— ದರಿದ್ರಲಕ್ಷ್ಮಿ !

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.— ದರಿದ್ರ ಲಕ್ಷ್ಮಿಯನ್ನು ನಂಬಿದರೆ, ನಮಗೆ ಹೊಟ್ಟೆಗೆ ಅನ್ನವಿರುವುದಿಲ್ಲ ಅಷ್ಟೆ ಎಲ್ಲೆಲ್ಲೂ ದರಿದ್ರ ಮುತ್ತಿಕೊಂಡುಬಿಡುತ್ತದೆ. ಇನ್ನು ಸುರಾಲಕ್ಷ್ಮಿ ಪಕ್ಷವನ್ನು ಬಡವರು ಅನುಸರಿಸಿಕೊಂಡು ಬಂದಿದ್ದಾರೆ, ಪಂಜಾಬ್ ದೇಶದಲ್ಲಿ ಈ ಪಾನನಿರೋಧವನು ಜಾರಿಗೆ ತರಬೇಕೆನ್ನುವ ಉದ್ದೇಶದಿಂದ ಒಂದು ಸಮಿತಿಯನ್ನು ಅಂದರೆ Dr. Tek Chand ರವನ್ನು ಆಧ್ಯಕ್ಷರಾಗಿ ಮಾಡಿದರು. ಆ ಸಮಿತಿಯವರು ಭಾರತದಲ್ಲೆ ಅಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲೂ ಭಾಷಣ ಮಾಡಿದರು. ಆದರೆ ಭಾಷಣ ಮಾಡಿದ್ದಾಯಿತೆ ಹೊರತು ಕಾರ್ಯರೂಪಕ್ಕೆ ತರುವುದಕ್ಕಾಗಲಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಮದ್ಯಪಾನ ಮಾಡುವುದರಿಂದ ಪ್ರಾಣ ಹಾನಿ ಮಾನಹಾನಿಯಾಗಿ ಇರುವ ಘನತೆ ಗೌರವಗಳನ್ನು ಕಳೆದುಕೊಳ್ಳುತ್ತೇವೆ. ಎಂದು ಪ್ರತಿಯೊಬ್ಬರಿಗೆ ಗೊತ್ತಿದ್ದರೂ ಸಹ ಮದ್ಯಪಾನ ಮಾಡುತ್ತಾರೆ. ನಮ್ಮ ಜನಾಂಗದಲ್ಲಿ ಎರಡು ವರ್ಗ ಇದೆ. ಒಂದು ವರ್ಗದವರು ಹಣ ಖರ್ಚು ಮಾಡುವುದು ಹೇಗೆ ಎನ್ನುವುದು ಗೊತ್ತಾಗದೆ ಫ್ಯಾನ್, ಫೋನ್, ವ್ಯಾನ್, ಇಟ್ಟಂಥ ಜನ ಬಡವರು ಹೊಟ್ಟೆಗೆ ಹಿಟ್ಟಿಲ್ಲದವರು ಕಲ್ಲು ಜಲ್ಲಿಗಳನ್ನು ಹೊಡೆದು ಮಣ್ಣಿನಲ್ಲಿ ಕೆಲಸ ಮಾಡುವವರು ಇವರು ತಮಗೆ ಬಂದ ಆದಾಯದಲ್ಲಿ ಅರ್ಧವನ್ನು ಕುಡಿಯುವುದಕ್ಕೆ ಖರ್ಚು ಮಾಡಿ ಆಮೇಲೆ ಬರೀ ಕೈಯಲ್ಲಿ ಮನೆಗೆ ಹೋಗುವವರು. ಆದರೆ ಮೊದಲನೇ ವರ್ಗದ ರೀತಿ-ನೀತಿಯೇ ಬೇರೆ. ಹಾಗೆಯೇ ನಮ್ಮ ಸಮಾಜವನ್ನು ಎರಡು ಭಾಗಗಳಾನ್ನಾಗಿ ವಿಂಗಡಿಸಬಹುದು. ಒಂದು ಬುದ್ಧಿಜೀವಿಗಳ ಸಮಾಜ ಮತ್ತೊಂದು ಶ್ರಮಜೀವಿಗಳ ಸಮಾಜ. ಬಡವರು ಹಿಂದುಳಿದವರು ಅವಿದ್ಯಾವಂತರು ಹೊಟ್ಟೆಗೆ ಹಿಟ್ಟಿಲ್ಲದವರು-ಇವರನ್ನು ನಾವು ಶ್ರಮಜೀವಿಗಳೆಂದು ಕರೆಯುತ್ತೇವೆ. ನಮ್ಮ ದೇಶದಲ್ಲಿ ಇಂಥ ಶ್ರಮಜೀವಿಗಳೇ ಹೆಚ್ಚು. ಇವರುಗಳು ಹೆಂಡ ಸಾರಾಯಿ ಸೇಂದಿ ಸರೆ-ಮುಂತಾದುವುಗಳನ್ನು ಕುಡಿಯುತ್ತಾರೆ. ಫೋನ್ ವ್ಯಾನ್ ಫ್ಯಾನ್ ಇಟ್ಟಂಥ ಜನ ಒಂದು ದೊಡ್ಡ ಹೋಟೆಲಿಗೆ ಹೋಗಿ ಅಷ್ಟೇ ಒಳ್ಳೆಯದಾದ ವಾತಾವರಣದಲ್ಲಿ ಕುಳಿತು

ಕುಡಿಯುತ್ತಾರೆ ಆದರೆ ಬಡವರು ಕೂಲಿಗಾರರು ಊರ ಹೊರಗಡೆ ಇರುವ ಗುಡಿಸಲುಗಳಲ್ಲಿ ಕುಡಿಯುತ್ತಾರೆ, ಧನವಂತರು ಕಾರಿನಲ್ಲಿ ಹೋಗಿ ಬ್ರಾಂದಿ ಜಿನ್ ಮುಂತಾದುವನ್ನು ಕುಡಿಯುತ್ತಾರೆ ಕಾರಿನ ಡ್ರೈವರ್ ಹುಷಾರಾಗಿ ಮನೆಗೆ ತಂದು ಬಿಡುತ್ತಾನೆ. ಪಾಶ್ಚಾತ್ಯ ದೇಶಗಳಲ್ಲಿ ಜನರು ಹಿತ ಮಿತವಾಗಿ ಕುಡಿದು ಆರೋಗ್ಯವನ್ನು ಕಾಪಾಡಿ ಕೊಳ್ಳುತ್ತಾರೆ ಅಲ್ಲಿನ ಹವಾ ಮಾನವೇ ಅದಕ್ಕೆ ಮುಖ್ಯ ಕಾರಣ ಚಳಿದೇಶ.

11-50 A.M.

ಪ್ರತಿ ನಿತ್ಯವೂ ನಮ್ಮ ಮಾರಲ್ ವ್ಯಾಲ್ಯೂಸ್ (Moral and human values) ಏನು ಇದೆ ಅದು ದಿನೇ ದಿನೇ ಕೆಳಮಟ್ಟಕ್ಕೆ ಬರುತ್ತಿದೆ. ಆದಕೋಸ್ಕರವೇ ಇದರ ಇತಿಹಾಸದ ಹಿನ್ನೆಲೆ ಹೇಳುತ್ತಿದ್ದೇನೆ. ಜೊತೆಗೆ ಮಂತ್ರಿಗಳು ಅನೇಕ ಉಪಪ್ರಶ್ನೆಗಳಿಗೆ ಬೇಕಾದಷ್ಟು ಉತ್ತರ ಕೊಟ್ಟಿದ್ದಾರೆ. ಅವು ಕಾನೂನಿನಲ್ಲಿದೆಯೇ ಹೊರತು ಕಾರ್ಯರೂಪದಲ್ಲಿ ಇಲ್ಲ. ಉದಾಹರಣೆಗೆ ದೇವಸ್ಥಾನದ ಹತ್ತಿರ, ಪಾಠಶಾಲೆಗಳ ಹತ್ತಿರ, ಕಾಲೇಜುಗಳ ಹತ್ತಿರ ಇರಬಾರದು ಎಂದ ಕಾನೂನೂ ಇದೆ. ನನ್ನದೇ ಕ್ಷೇತ್ರದಲ್ಲಿ ಅಂದರೆ ಬ್ರಿಗೇಡ್ ರೋಡಿನಲ್ಲಿ ಒಂದು ಹೆಂಡದ ಅಂಗಡಿ ಸಾರಾಯಿ ಅಂಗಡಿ ಬೀರ್ ಅಂಗಡಿ ಮಟ್ಟ ಮತ್ತು ಜಲಪುರಿ ಒಂದೇ ಬೀದಿಯಲ್ಲಿ ಇದೆ. ಅಲ್ಲಿ ಯಾರು ಕೂಡ ಗೌರವಸ್ಥರು ಸಾಯಂಕಾಲದಲ್ಲಿ ಓಡಾಡುವ ಹಾಗಿಲ್ಲ. ಕಡು ಬಡವ ಜನ ಎಲ್ಲಿದ್ದಾರೆ ಅಲ್ಲಿ ಈ ಅಂಗಡಿಗಳನ್ನು ಹೆಚ್ಚಾಗಿ ತೆರೆಯುತ್ತಾರೆ. ಅದೇ ಅಂಗಡಿಯನ್ನು ಪ್ಯಾಲೆಸ್ ಆರ್ಚರ್ಡ್‌ನಲ್ಲಿ ಬಸವನಗುಡಿಯಲ್ಲಿ ಏತಕ್ಕೆ ಹಾಕಲಿಲ್ಲ? ಎಂದು ಕೇಳಿದರೆ ಅಲ್ಲಿ ಜಾಗ ತೋರಿಸಿ ಎಂದು ಹೇಳುತ್ತಾರೆ. ನಾವು ಜಾಗ ಎಲ್ಲಿ ತೋರಿಸುವುದು. ಕೆಲವರು ಕಂಡಹಾಗೆ ಕುಡಿಯುತ್ತಾರೆ. 80 ಪರ್ಸೆಂಟ್ ಕಳ್ಳತದದಲ್ಲಿ ಕುಡಿಯುತ್ತಾರೆ. ಶ್ರಮ ಜೀವಿಗಳು ಕೂಲಿಗಾರರು ಕುಡಿಯುವುದನ್ನು ನೋಡಿದ್ದೇವೆ. ಸಮಾಜದ ಮಟ್ಟ ಎಷ್ಟು ಕೆಳಮಟ್ಟಕ್ಕೆ ಬಂದಿದೆ ಎಂದರೆ ಕೆಲವರು ತಮ್ಮ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಿ ಕುಡಿಯುತ್ತಾರೆ. ನಾವು ಸೀತೆ ದಮಯಂತಿ ದ್ರೌಪತಿ ಕತೆ ಕೇಳಿದ್ದೇವೆ. ಮುಖ್ಯವಾಗಿ ಲೊಕೇಷನ್ ವಿಚಾರ ಬಹಳ ಮುಖ್ಯವಾದುದು. ಇದನ್ನು ಪೂರ್ತಿಯಾಗಿ ನಿಲ್ಲಿಸುವುದಕ್ಕೆ ಆಗುವುದಿಲ್ಲ ಉದಾಹರಣೆ ಮದ್ರಾಸಿನಲ್ಲಿ ಮಾಡಿದ್ದಾರೆ ಮಾಡಿದ್ದಾರೆ ಅಲ್ಲಿ ಡ್ರೈ ಏರಿಯಾ ವೆ ಏರಿಯಾ ಎಂದು ಮಾಡಿದ್ದಾರೆ ಅಲ್ಲಿಯೂ ಎಷ್ಟೋ ಅನಾಹುತಗಳು ಆಗುತ್ತವೆ. ಕೆಮ್ಮಣ್ಣುಗುಂಡಿಯಲ್ಲಿ ಅದಂತ ಅನಾಹುತದಿಂದ ಬಂಡವಾಳಷಾಹಿ ಯಾವ ಮಟ್ಟದಲ್ಲಿದೆ ಎಂದು ಚೆನ್ನಾಗಿ ಗೊತ್ತಾಗುತ್ತದೆ. ಟೆಂಪರೆನ್ಸ್ ಬೋರ್ಡ್ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ, ಇದಕ್ಕೆ ಕಮಿಟಿ ಇದೆ ಹಣ ಸಾಲದು ಬೇಕಾದಷ್ಟು ಪ್ರಾಪಗಂಡ ಹಾಗಬೇಕು ಭಾಷಣದಲ್ಲಿ ಆದರೆ ಆಗುವುದಿಲ್ಲ ಪ್ರತಿಯೊಬ್ಬರೂ ಆದರ್ಶಜೀವನ ಮಾಡಬೇಕು, ಸಿನಿಮಾ ಹೌಸಿನಲ್ಲಿ ತೋರಿಸಬೇಕು ಆಕಾಶವಾಣಿಯಲ್ಲಿ ಹೇಳಬೇಕು ಯುವಕ ವೃಂದಕ್ಕೆ ಇದು ಫ್ಯಾಷನ್ ಆಗಿದೆ ಇದರ ಬಗ್ಗೆ ಕಾಲೇಜುಗಳಲ್ಲಿ ಹಾಗೂ ಪ್ರೈಮರಿ ಸೆಕ್ಷನ್‌ಗಳಲ್ಲಿ ಬರೀಪಾಠ ಹೇಳಿದರೆ ತಪ್ಪಾಗಲಾರದು. ಮಾನ್ಯ ಅಧ್ಯಕ್ಷರೇ. ಈಗಲಾದರೂ ನಮ್ಮ ಮಂತ್ರಿ ಶ್ರೀ ಯಾಹ್ಯಾರವರು ದೊಡ್ಡ ಮನಸ್ಸು ಮಾಡಲಿ ಇದನ್ನು ಆಲ್ಟರ್‌ನೇಟೀವ್ ಆಗಿ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡಲಿ ಸುಂಗೆ ಮಾಡಿದ ದುಡ್ಡಿನಲ್ಲಿ ಸರ್ಕಾರ ನಡೆಸುವುದು ಬೇಡ. 60 ಖರ್ಚು ಮಾಡುವ ಕಡೆ 50 ಖರ್ಚು ಮಾಡೋಣ ಆದುದರಿಂದ ಈ ಠರಾವಿಗೆ ಬೆಂಬಲ ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಯಾಹ್ಯಾ (ಅಬ್ಕಾರಿ ಮತ್ತು ಕಾರ್ಮಿಕ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಪಾನನಿರೋಧ ಜಾರಿಗೆ ತರಬೇಕು ಎನ್ನುವ ಬಗ್ಗೆ ಕೆಲವರ ವಾದ ವಿವಾದಗಳು ಈಗಿನದು ಅಲ್ಲ. ಇದರ ಬಗ್ಗೆ ಹೇಳುವುದಾದರೆ ಇದು ನೂರಾರು ವರ್ಷಗಳಿಂದಲೂ ನಡೆಯುತ್ತಾ ಬಂದಿದೆ. ಸಾಮಾಜಿಕ ದೃಷ್ಟಿಯಿಂದ ಕೆಲವರು ಪಾನನಿರೋಧವನ್ನು ತೆಗೆಯಬೇಕು, ಕೆಲವರು ತೆಗೆಯ ಬಾರದು ಎಂದು ವಾದ ಮಾಡುತ್ತಾ ಬಂದಿದ್ದಾರೆ. ಇನ್ನೂ ವಾದ ಬೆಳೆಯುತ್ತಾ ಹೋಗುತ್ತಿದೆ, This is a highly controvertial and debatable subject. For some people it is a necessary evil. ಪ್ರಭಾಕರ್‌ರವರು ಹೇಳಿದ ಹಾಗೆ ಕುಡಿಯುವುದರಿಂದ ಬಹಳಷ್ಟು ಹಾನಿ ಇದೆ, ಬಡ ಜನರಿಗೆ ರೈತರಿಗೆ, ಕಾರ್ಮಿಕರಿಗೆ ಬಹಳಷ್ಟು ತೊಂದರೆಯಾಗುತ್ತದೆ, ಆದುದರಿಂದ ಸಮಾಜಕ್ಕೆ ಹಾನಿ ಇದೆ, ಇದು ಆರ್ಥಿಕ ದೃಷ್ಟಿಯಿಂದ ದೇಶವನ್ನೇ ಕೆಡಿಸಬಹುದು ಎನ್ನುವ ವಿಚಾರ ಹೇಳಿದ್ದಾರೆ. ಅದು ಸಂಪೂರ್ಣವಾಗಿ ಅಲ್ಲದಿದ್ದರೂ ಬಹಳ ಮಟ್ಟಿಗೆ ಸತ್ಯವಾದ ವಿಚಾರ ಹೇಳಿದ್ದಾರೆ. ಈ ರೀತಿ

ಕುಡಿಯುವುದರಿಂದ ಆದಷ್ಟು ಹಾನಿ ಇದೆ, ಹಾನಿ ಇಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಲಾಭವೂ ಇದೆ, ಬಹಳಷ್ಟು ತೊಂದರೆಯೂ ಇದೆ ಎಂದು ಕೆಲವರು ಹೇಳಿದ್ದಾರೆ. ಸ್ವಲ್ಪ ಕುಡಿದರೆ ಶಾಂತಿ ಬರುತ್ತದೆ ಎಂದು ಈ ಸದನದಲ್ಲಿಯೇ ಕೆಲವರು ವಾದ ಮಾಡಿದ್ದಾರೆ. ನಮ್ಮ ಜೀವನವೇ ತುಂಬ ಕಷ್ಟದಿಂದ ಇದೆ, ಸ್ವಲ್ಪ ಕುಡಿದರೆ ತೃಪ್ತಿ ಬರುತ್ತದೆ ದು ಹೇಳಿದ್ದಾರೆ, ಡಾಕ್ಟರುಗಳು ಕೂಡ ಹೇಳುತ್ತಾರೆಂದು ಕೆಲವರು ಹೇಳಿದ್ದಾರೆ. ಕುಡಿಯುವುದರಿಂದ ತುಂಬಾ ಹಾನಿ ಎನ್ನುವುದು ಒಪ್ಪಿಕೊಳ್ಳುವಂತ ವಿಚಾರ. ಮಾನ್ಯ ನಂಜೇಗೌಡರು ಹೇಳಿದರು ಕುಡಿಯುವುದೇ ಒಂದು ಶಾಪ, ಈ ಶಾಪ ಬಂದ ಮೇಲೆ ಈ ಶಾಪ ಬೇಗ ಹೋಗುವುದಿಲ್ಲ. ಅದೇ ಕಾರಣದಿಂದಲೇ ಶಾಪ ಮುಂದುವರಿಯುತ್ತಿದೆ. ನಿರ್ಣಯದಲ್ಲಿ ಏನೂ ಇದೆ ಎಂದರೆ, ಸಂಪೂರ್ಣವಾಗಿ ಪಾನ ನಿರೋಧ ಜಾರಿಗೆ ತರಬೇಕು ಎಂದು ಇದೆ. ಇದರ ಬಗ್ಗೆ ವಾದವಿವಾದಗಳು ಇದ್ದೇ ಇದೆ. ಟೋಟಲ್ ಪ್ರಾಹಿಬಿಷನ್ ಬಗ್ಗೆ ಇಬ್ಬರು ಮಾತ್ರ ಹೇಳಿದ್ದಾರೆ, ಬಾಕಿಯವರು ತಮ್ಮ ತಮ್ಮ ಅಭಿಪ್ರಾಯ ಹೇಳಿದ್ದಾರೆ. ಮಾನ್ಯ ಚಂದ್ರಶೇಖರ್‌ರವರು ಲಿಮಿಟೇಷನ್ ಆಫ್ ಪ್ರಾಹಿಬಿಷನ್ ವಿಚಾರ ಹೇಳಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರದ ಬಗ್ಗೆ ಮಾತನಾಡುತ್ತಾ, 'Certain section should not drink; other can drink' ಎಂದು ಹೇಳಿದ್ದಾರೆ. ಅದೇ ರೀತಿ ಲಿಂಗಪ್ಪನವರು ಮತ್ತು ನಂಜೇಗೌಡರು ರಾಷ್ಟ್ರೀಕರಣದ ಬಗ್ಗೆ ಬೆಂಬಲ ಕೊಟ್ಟಿದ್ದಾರೆ. Whether you require total prohibition is a simple subject but that it should be nationalised is certainly contradiction to the spirit of the Resolution.

ಶ್ರೀ ಎಚ್. ಎನ್. ನಂಜೇಗೌಡ.—ರಾಜಧಾನಿಯಲ್ಲಿ ಲಿಕ್ಕರ್ ಇಟ್ಟುಕೊಂಡಿರುವವರು 1-2 ಕೋಟಿ ರೂಪಾಯಿ ಮೇಲ್ಪಟ್ಟು ಬ್ಲಾಕ್ ಮನಿ ಮಾಡುತ್ತಿದ್ದಾರೆ. It is an industry which gives thousand per cent profit. Why not you take it?

MR. DEPUTY SPEAKER.—That is outside the scope.

12 NOON

SRI S M. YAHYA.—It is another matter, altogether. I do agree that there is black money involved in it. There is no two opinion but to say that there must be total prohibition and again to say that it should be nationalised is not correct because it is against the spirit of the resolution. That is what I would like to say. ಈ ಕಾರಣದಿಂದ ರಾಷ್ಟ್ರೀಕರಣ ಮಾಡಿದರೆ, ನಮ್ಮ ಸರ್ಕಾರವೇ ದೊಡ್ಡ ಕಂಟ್ರಾಕ್ಟ್ ಮಾಡಿದಂತಾಗುತ್ತದೆ, ಆದುದರಿಂದ ಖಂಡಿತ ನಾವು ಈ ನೀತಿ ಹಾಕಬಾರದು. ಏಕೆಂದರೆ ಸರ್ಕಾರವೇ ಒಂದು ಲಿಕ್ಕರ್ ಸಪ್ಲೈ ಮಾಡುವುದು ಯಾವುದೇ ಒಂದು ಸರ್ಕಾರಕ್ಕೂ ಒಳ್ಳೆಯ ಹೆಸರು ತರುವುದಿಲ್ಲ. Nationalisation of distilleries and breweries is not certainly an ideal thing because Government cannot induce people to drink my manufacturing liquor.

SRI H. N. NANJE GOWDA.—Arrack is manufactured by the Government. Who supplies Arrack? I want the Hon'ble Minister to present the facts as they are.

SRI S. M. YAHYA.—I want to make it clear. Manufacture of liquor is done by the private distilleries. The Government is only controlling so that there should not be any misuse. Control is quite different from manufacture.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ಸ್ವಾಮಿ, ಈಗ ತಾನೇ ತಾವು ಶಾಪ ಎನ್ನುವ ಬಗ್ಗೆ ಹೇಳಿದಿರಿ, ಆ ಶಾಪಕ್ಕೆ ವಿಮೋಚನೆ ಮಾರ್ಗ ಇರುತ್ತದೆ ಅದನ್ನು ಹೇಳಬೇಕು. ಮತ್ತೆ ತಮ್ಮ ಇಸ್ಲಾಂ ಮತದಲ್ಲಿ ಏನು ಹೇಳಿದೆ ಅದನ್ನು ಹೇಳಬೇಕು.

ಶ್ರೀ ಜೆ. ಎಂ. ಕಬಾಡೆ.—ಈ ಅರ್‍ರ್ಯಾಕ್ ತರುವವರು ಯಾರು ? ಅದನ್ನು ಸ್ಪಷ್ಟ ಮಾಡಬೇಕು ಸಪ್ಲೈ ಮಾಡುವವರು ಯಾರು ? ಕಂಟ್ರಾಕ್ಟ್ ಯಾರಿಂದ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು.

MR. DEPUTY SPAKER.—The Hon. Minister has replied that the Government is not manufacturing but the supply is controlled by them.

ಶ್ರೀ ಎಸ್. ಎಂ. ಯಾಹ್ಯಾ.—We have given even transporation to others. ಈಗ ಇದನ್ನು ನ್ಯಾಷನಲೈಸ್ ಮಾಡುವುದು ಸರ್ಕಾರಕ್ಕೆ ಸೂಕ್ತವಲ್ಲ ಎಂದು ತೋರುತ್ತದೆ. ಇದರಿಂದ ಬಹಳಷ್ಟು ಬಡವರಿಗೆ, ಕಾರ್ಮಿಕರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಶೀರನಾಳಿ ಚಂದ್ರಶೇಖರವರು, ಮಾನ್ಯ ಲಿಂಗಪ್ಪನವರು ಹೇಳಿದರು, ವಿದ್ಯಾವಂತರು, ಶ್ರೀಮಂತರು ಕುಡಿಯಬೇಕು ಎಂದರೆ this is another contradiction. After all, poor people imitate the rich people and the educated people. Therefore, one of the points in 12 point programme is the leaders, the educated and the others should be model example to others. This is very much essential. I would say the rich people should not drink first. The educated should not drink first; and the leaders should not drink first so that the poor people may also imitates the higher hierarchy. ಆದ್ದರಿಂದ ಇವೊತ್ತು ನಾವು ವಿದ್ಯಾವಂತರಾಗಲಿ, ಸಮಾಜದಲ್ಲಿ ದುಡಿಯುವರಾಗಲಿ, ನಾಯಕರಾಗಲಿ, ಕುಡಿಯಲಿಲ್ಲ ಎಂದರೆ ಬಡ ಜನರು ಕುಡಿಯುವುದಿಲ್ಲ ಇವೊತ್ತು ಬಡ ಜನರು ನಮ್ಮ ಮಾಲೀಕ ಕುಡಿಯುತ್ತಾನೆ ಎಂದು ಅವರು ಕುಡಿಯುತ್ತಾರೆ, ಅದಕ್ಕಾಗಿ ಈಗ ಇರತಕ್ಕ ೧೨ ಅಂಶಗಳಲ್ಲಿ ದೊಡ್ಡ ಅಂಶ ಎಂದರೆ ನಾವೆಲ್ಲರೂ ಕುಡಿಯಬಾರದು ಎಂದು, ಅದನ್ನು ನಾವು ಯೋಚನೆ ಮಾಡಬೇಕು, ಈ ಪ್ರಾಹಿಬಿಷನ್, ಟೋಟಲ್ ಪ್ರೊಹಿಬಿಷನ್ ಜಾರಿಗೆ ತರುವಾಗ ಸಮಾಜಕ್ಕೆ ಮಾರ್ಗದರ್ಶಕರಾಗಿರಬೇಕು, ಅದು ೧೨ ಪಾಯಿಂಟ್ಸ್‌ನಲ್ಲಿ ಒಂದು ಪಾಯಿಂಟ್ ಇದೆ. ಈ ಒಂದು ವಾತಾವರಣ ಸುಧಾರಣೆಯಾಗಬೇಕು. ಈ ಒಂದು ವಾತಾವರಣ ಸುಧಾರಣೆಯಾಗದೆ ಬರೀ ಕಾನೂನು ಮುಖಾಂತರ ಪ್ರಾಹಿಬಿಷನ್ ಜಾರಿಗೆ ತಂದರೆ ದೇಶಕ್ಕೆ ಹಾನಿಯಾಗುತ್ತದೆ, ಸಮಾಜಕ್ಕೂ ಹಾನಿಯಾಗುತ್ತದೆ. ಏಕೆಂದರೆ ನಾವು ಕಾನೂನನ್ನು ಮಾಡಬಹುದು, ನಮ್ಮ ರಾಜ್ಯದಲ್ಲಿ ಪ್ರೊಹಿಬಿಷನ್ ಲಾ ಇದೆ ಅದನ್ನು ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ೧೯೬೭ರಲ್ಲಿ ತೆಗೆದುಹಾಕಿದ್ದಾರೆ ಅದನ್ನು ಇಂಪೋಸ್ ಮಾಡಬಹುದು, ಅದನ್ನು ಮಾಡಿದರೆ ಈ ಕಾನೂನಿಂದ ಈ ಒಂದು ದೊಡ್ಡ ಚಟವನ್ನು ದೂರ ಮಾಡಬಹುದೇ, ಈ ಒಂದು ಕಾನೂನನ್ನು ಜಾರಿಗೆ ತರುವುದಕ್ಕೆ ಆಗುತ್ತದೆಯೋ ಎನ್ನುವುದು ಒಂದು ದೊಡ್ಡ ಪ್ರಶ್ನೆ. ಈ ಒಂದು ವಾತಾವರಣದಲ್ಲಿ ಈ ಪ್ರೊಹಿಬಿಷನ್ ಲಾ ಇಂಟ್ರಡ್ಯೂಸ್ ಮಾಡಿದರೆ ಅದನ್ನು ಎಫೆಕ್ಟೀವ್ ಆಗಿ ಜಾರಿಗೆ ತರಲಿಕ್ಕೆ ಆಗುವುದಿಲ್ಲ. ಹಾಗೆ ಜಾರಿಗೆ ತರಬೇಕಾದರೆ ಒಳ್ಳೆಯ ವಾತಾವರಣ ಉಂಟು ಮಾಡಬೇಕು, ಆ ರೀತಿ ಒಳ್ಳೆಯ ವಾತಾವರಣ ಉಂಟು ಮಾಡಬೇಕು ಎಂದು ೧೨ ಅಂಶದ ಕಾರ್ಯವನ್ನು ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯಸರ್ಕಾರಗಳಿಗೆ ಕೊಟ್ಟಿದ್ದಾರೆ. ಈ ೧೨ ಅಂಶದ ಕಾರ್ಯದಲ್ಲಿ ಉತ್ತಮ ವಾತಾವರಣ ಉಂಟು ಮಾಡಲಿಕ್ಕೆ ಮಾಡಿದ್ದಾರೆ. ಈ ಕುಡಿಯುವ ಚಟ ಎಲ್ಲಾ ಚಟಗಳಿಗಿಂತ ಕೆಟ್ಟ ಚಟ ಎಂದು ಗೊತ್ತಿದೆ, ಆದರೆ ನಾನಂತು ಕುಡಿಯುವುದಿಲ್ಲ. ಹುಡುಗಿಯವರ ಹುಚ್ಚು ಇದ್ದರೆ ಮದುವೆ ಮಾಡಿ ತೋರಿಸಬಹುದು, ಆದರೆ ಈ ಕುಡಿತದ ಹುಚ್ಚು ಇದ್ದರೆ ಯಾವರೀತಿ ಮಾಡಿ ತೋರಿಸುವುದಕ್ಕಾಗುವುದಿಲ್ಲ. ಈಗ ಪ್ರಾಹಿಬಿಷನ್ ತರಬಾರದು ಎಂದು ಯಾರು ಹೇಳುವುದಿಲ್ಲ. ನಮ್ಮ ಪಕ್ಷ ಬಡವರ ಹಿತಕ್ಕಾಗಿ ದುಡಿಯಬೇಕು ಎಂದು ಇರತಕ್ಕದ್ದು. ನಮಗೆ ಜನರ ಬೆಂಬಲ ಸಂಪೂರ್ಣ ಇದೆ, ನಾವು ಇದ್ದೇವೆ ಆ ಮನಾಪಲಿ ಲಿಂಗಪ್ಪನವರಿಗೆ ಕೊಟ್ಟಿಲ್ಲ.

ಶ್ರೀ ಕೋಟಂದೂರು ಲಿಂಗಪ್ಪ.—ಜನ ಬೆಂಬಲ ಇಲ್ಲದೇ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಇಡೀ ಭೂಲೋಕದ ಬಡವರಿಗೆ ಒಬ್ಬರೇ ನಾಯಕರು, ಎಂದರೆ ಮಾನ್ಯ ಲಿಂಗಪ್ಪನವರು ಎನ್ನುವ ಮನೋಭಾವನೆ ಅವರಿಗೆ ಹುಟ್ಟಿದೆ. ಈಗ ಈ ಪ್ರಾಹಿಬಿಷನ್ ವಿಚಾರದಲ್ಲಿ ಬಹಳಷ್ಟು ಗಂಭೀರ ರೀತಿಯಲ್ಲಿ ಯೋಚನೆ ಮಾಡಬೇಕಾಗಿದೆ. ಕಾನೂನು ಮಾಡುವುದು ಸರ್ಕಾರದ ಕೆಲಸ, ಆದರೆ ಇದು ಪ್ರತಿಯೊಬ್ಬ ವ್ಯಕ್ತಿಯ ಕೆಲಸ ಈ ಕಾರಣದಿಂದ ನಾವೆಲ್ಲರೂ ಯೋಚನೆ ಮಾಡಿ

ವಾತಾವರಣ ಚೆನ್ನಾಗಿ ಇದ್ದರೆ ಕಾನೂನನ್ನು ಯಾವರೀತಿ ಬೇಕಾದರು ತರಬಹುದು. ಕೆಲವರಿಗೆ ಲೈಸೆನ್ಸ್ ಕೊಡಬೇಕು ಎನ್ನುವುದು ಇದ್ದರೆ ಅದೇರೀತಿ ಕೊಡೋಣ. ಈಗ ಲಿಮಿಟೆಡ್ ಪ್ರೊಹಿಬಿಷನ್ ತರುವುದು ಒಳ್ಳೆಯದಲ್ಲ, ಟೋಟಲ್ ಪ್ರೊಹಿಬಿಷನ್ ತರಬೇಕು. ಹಾಗೆ ಒಳ್ಳೆಯ ನೀತಿ ಉಂಟು ಮಾಡಿ ಕೆಲಸ ಮಾಡಿದರೆ ಇದರಿಂದ ದೇಶಕ್ಕೆ ಲಾಭವಾಗುತ್ತದೆ.

SRI S. M. SHEERNALLY CHANDRASHEKAR.—I have advocated for the total prohibition.

ಶ್ರೀ ಎಸ್. ಎಂ. ಯಾಹ್ಯಾ.—ಅದಕ್ಕಾಗಿ ಈ ಕುಡಿಯುವುದರಿಂದ ಏನೆಲ್ಲಾ ಸಾಮಾಜಿಕವಾಗಿ, ಆರ್ಥಿಕವಾಗಿ, ಹಾನಿಯಾಗುತ್ತದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಬೇಕೆಂದು ಶ್ರೀ ವಿ. ಕೆ. ಆರ್. ವಿ. ರವರ ಇನ್ಸ್ಟಿಟ್ಯೂಷನ್‌ನಲ್ಲಿ ಪ್ರೊಫೆಸರ್ ಒಬ್ಬರು ಹೇಳಿದ್ದಾರೆ. ಡಾ. ತಿಮ್ಮಯ್ಯನವರೂ ಕೂಡ ಅದರ ಬಗ್ಗೆ ಆಳವಾಗಿ ಯೋಚನೆ ಮಾಡಿ ಅವರ ಶಿಫಾರಸಿನ ಸಹಿತ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ, ಅವನ್ನು ನಾವು ಅಧ್ಯಯನ ಮಾಡುತ್ತಿದ್ದೇವೆ. ಈ ಪ್ರೊಹಿಬಿಷನ್ ವಿಚಾರದಲ್ಲಿ ನಾನು ಎಲ್ಲರನ್ನೂ ಕೇಳಿಕೊಳ್ಳುವುದು ಇಷ್ಟೆ. ಇದು ನ್ಯಾಷನಲ್ ಪಾಲಿಸಿ ಆಗಬೇಕು ಎಂದು. ಇದು ಇಡೀ ದೇಶಕ್ಕೆ ಅನ್ವಯಿಸಬೇಕು, ಇದು ತಾಲ್ಲೂಕಿಗೇ ಆಗಲಿ ಅಥವಾ ಒಂದು ಜಿಲ್ಲೆಗೇ ಆಗಲಿ ಅಥವಾ ಒಂದು ಸ್ಟೇಟ್‌ಗೇ ಆಗಲಿ ಅನ್ವಯಿಸಬಾರದು ಎಂದು ನನ್ನ ಅಭಿಪ್ರಾಯ. ಇದು ನ್ಯಾಷನಲ್ ಪಾಲಿಸಿ ಆಗಬೇಕು. There should be a national policy on prohibition and to that effect the Central Government has given 12 point programme and this is the initial stage in introducing the prohibition. ಈ ಪ್ರೊಹಿಬಿಷನ್ ವಿಚಾರದಲ್ಲಿ ಹೇಳುವುದು ಇದೇನೂ ಲಾಸ್ಟ್ ಸ್ಟೇಜ್ ಅಲ್ಲ, ಇದು ಫಸ್ಟ್ ಸ್ಟೇಜ್. ಈ ಕಾರಣದಿಂದ ಈ ಪ್ರೊಹಿಬಿಷನ್ ಅನ್ನು ಜಾರಿಗೆ ತರಬೇಕಾಗಿದ್ದರೆ ಇದು ಒಂದು ನ್ಯಾಷನಲ್ ಪಾಲಿಸಿ ಆಗಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ 12 ಅಂಶದ ಕಾರ್ಯಕ್ರಮವನ್ನೂ ಕೂಡ ಕೊಟ್ಟಿದ್ದಾರೆ. ಅದರಲ್ಲಿ ಎಷ್ಟೋ ಜನರು ಹೇಳುತ್ತಾರೆ ಈ 12 ಅಂಶದ ಕಾರ್ಯಕ್ರಮ ಏನು ಇದೆ ಅದನ್ನು ಜಾರಿಗೆ ತರುವುದು ಅಷ್ಟು ಸುಲಭವಲ್ಲ ಎಂದು. ಆದರೆ ನಮ್ಮ ಕರ್ನಾಟಕದಲ್ಲಿ ಇದನ್ನು ಆದಷ್ಟು ಮಟ್ಟಿಗೆ ಜಾರಿಗೆ ತರುವುದಕ್ಕೆ ಪ್ರಯತ್ನಪಡುತ್ತಿದ್ದೇವೆ. ಇದರ ಬಗ್ಗೆ ನಾವು ಒಂದು ಸರ್ಕ್ಯುಲರ್ ಅನ್ನು ಹೊರಡಿಸಿದ್ದೇವೆ, ಅದು ಯಾವುದೆಂದರೆ ಆಫೀಸರುಗಳು ಆಫೀಸಿನ ವೇಳೆಯಲ್ಲಿ ಕುಡಿದುಕೊಂಡು ಬರಬಾರದು ಎಂದು ಹಾಗೆಯೇ ಡ್ರೈವರ್ಸ್ ಕೂಡ ಕುಡಿದುಕೊಂಡು ಬರಬಾರದು ಮತ್ತು ಪೋಲೀಸರಿಗೂ ಹೇಳಿದ್ದೇವೆ.

ಇನ್ನು ಈ ಅಂಗಡಿಗಳ ಬಗ್ಗೆ ಹೇಳಬೇಕಾದರೆ ಈ ಅಂಗಡಿಗಳು ಎಲ್ಲಿ ಇರಬೇಕು, ಎಲ್ಲಿ ಇರಬಾರದು ಅಂತ ಹೇಳಿದ್ದೇವೆ. ದೇವಸ್ಥಾನಗಳ ಮುಂದೆ, ಶಾಲಾಕಾಲೇಜುಗಳ ಮುಂದೆ ಮತ್ತು ಹೈವೇ ಇರುವಂಥಾ ಕಡೆಗಳಲ್ಲಿ ಇರಬಾರದು ಎಂದು ಹೇಳಿದ್ದೇವೆ. ಕೆಲವು ಕಡೆಗಳಲ್ಲಿ ಅಂಥಾ ಕಡೆ ಇದ್ದುದನ್ನು ತೆಗೆದು ಹಾಕಿದ್ದೇವೆ. ಆದರೆ ಬೆಂಗಳೂರು ಅಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈಗಾಗಲೇ ಬಹಳಷ್ಟು ಇದರ ಬಗ್ಗೆ ಜಾರಿಗೆ ತಂದಿದ್ದಾರೆ ಆಕ್ಷನ್‌ನಲ್ಲೂ ಕೂಡ ಇಂಥಾ ಕಡೆ ಇರುವ ಅಂಗಡಿಗಳನ್ನು ಬೇಕಾದಷ್ಟು ತೆಗೆದು ಹಾಕಿದಾರೆ, ಇನ್ನು ಕೆಲವು ಕಡೆ ತೆಗೆಯುತ್ತಿದ್ದಾರೆ. ಈ ರೀತಿ ಅಂಗಡಿಗಳನ್ನು ತೆಗೆಯುವಾಗ ಅದರಲ್ಲೂ ಸಹ ಸ್ವಲ್ಪ ಗಲಾಟೆ ಬರುತ್ತದೆ ಕೆಲವು ಸಲ ಒಳ್ಳೆಯದಾಗುತ್ತದೆ. ಇನ್ನು ಕೆಲವು ಸಲ ಇದನ್ನು ಒಪ್ಪಿಕೊಳ್ಳುವುದು ಕಷ್ಟ. ಕೆಲವು ಸಲ ಇಲ್ಲಿ ಸಿಟ್ ಲಿಕ್ಕರ್ ವ್ಯಾಪಾರಸ್ಥರು ಬಂದು ಆ ಅಂಗಡಿಗಳನ್ನು ಇಲ್ಲಿ ಇಡಬೇಡಿ ಬೇರೆ ಕಡೆ ಹಾಕಿ ಎಂದು ಒತ್ತಾಯ ಮಾಡುತ್ತಾರೆ. ಆ ಸಂದರ್ಭದಲ್ಲಿ ಅವರು ಹೇಳಿದಂತೆ ಒಪ್ಪಿಕೊಳ್ಳುವುದಕ್ಕೆ ಕಷ್ಟ ಬರುತ್ತದೆ. ಆದುದರಿಂದ ಈ ವಿಷಯದಲ್ಲಿ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಈ ಇಲ್ಲಿಸಿಟ್ ಲಿಕ್ಕರ್ ವಿಚಾರದಲ್ಲಿ ಈ ರೀತಿಯಾದ ತೊಂದರೆ ಬರುತ್ತದೆ.

ಇನ್ನು ಇದರ ಆದಾಯದ ಬಗ್ಗೆ ಹೇಳಿದ್ದಾರೆ. ಅ ವಿಚಾರದಲ್ಲಿ ನನ್ನ ಹೆಸರನ್ನು ತೆಗೆದುಕೊಂಡು ಹೇಳಿದ್ದಾರೆ. ಇದರ ವರಮಾನದ ಬಗ್ಗೆ ಹೇಳುವುದಕ್ಕೆ ನಾನು ಈಗ ಹೋಗುವುದಿಲ್ಲ. ಒಟ್ಟಿನಲ್ಲಿ ನಾನು ಇದರ ಬಗ್ಗೆ ಹೇಳಬೇಕಾದರೆ ಇದರಿಂದ ಬರುವ ಆದಾಯ ಹೋಗುತ್ತದೆ ನ್ನುವ ವಿಚಾರದಲ್ಲಿ ಹೇಳಬೇಕಾದರೆ ಇದಕ್ಕೆ ಲಾಸ್ಟ್ ಪ್ರಿಯಾರಿಟಿ ನನ್ನದು ಇದೆ ಎಂದು ಹೇಳುತ್ತೇನೆ. ನಿಮಗೆ ಒಂದು ಸಣ್ಣ ಉದಾಹರಣೆ ಹೇಳುವುದಾದರೆ ಈ ಪ್ರೊಹಿಬಿಷನ್ ತಕ್ಷಣ ಜಾರಿಗೆ

ತಂದರೆ ಸೌತ್ ಕೆನರಾ ಒಂದು ಜಿಲ್ಲೆಯಲ್ಲೇ 10 ಸಾವಿರ ಜನ ಟ್ಯಾಪರ್ಸ್‌ಗೆ ಕೆಲಸ ಹೋಗುವುದಲ್ಲದೆ ಇನ್ನೂ ಬೇಕಾದಷ್ಟು ಜನಕ್ಕೆ ಕೆಲಸ ಹೋಗುತ್ತದೆ. ಇದರಲ್ಲಿ ಒಂದು ತೊಂದರೆ ಏನು ಇದೆ ಎಂದರೆ ಇದರಿಂದ ಸಾವಿರಾರು ಜನಕ್ಕೆ, ಲಕ್ಷಾಂತರ ಜನ ಅನ್ ಎಂಪ್ಲಾಯ್ ಆದರೆ ಅವರಿಗೆ ತಕ್ಷಣ ಕೆಲಸ ಕೊಡಲಿಕ್ಕೆ ಬರುವುದಿಲ್ಲ. ಆದುದರಿಂದ ನಾನು ಹೇಳುವುದು ಟೋಟಲ್ ಪ್ರೊಹಿಬಿಷನ್ ಬಂದಾಗ ಈ ಎಲ್ಲಾ ವಿಚಾರವನ್ನೂ ಯೋಚನೆ ಮಾಡಿ ಕೊನೆಗೆ ಸರ್ಕಾರಕ್ಕೆ ಬರುವಂಥಾ ಆದಾಯವನ್ನು ಬಿಡುವುದಕ್ಕಾಗುವುದಿಲ್ಲ ಎಂದು ಬಂದಾಗ ಅವಾಗ ಅದಕ್ಕೆ ಬೇರೆ ಒಂದು ಆಲ್ಟರ್‌ನೇಟಿವ್ ಆಗಿ ಬರತಕ್ಕಂಥಾ ಆದಾಯ ಬಂದರೆ ಆವಾಗ ಇದನ್ನು ಬಿಡಬೇಕಾಗುತ್ತದೆ. ಆದುದರಿಂದ ಈ ಎಲ್ಲಾ ವಿಚಾರವನ್ನೂ ಒಂದು ಕಾಂಪ್ರಹೆನ್ಸೀವ್ ಆಗಿ ಸ್ಟಡಿ ಮಾಡಿ ಟೋಟಲ್ ಪ್ರೊಹಿಬಿಷನ್ ಜಾರಿಗೆ ತರಬೇಕು. ಈ ಒಂದು ಸ್ಟೇಟ್‌ನಲ್ಲಿ ಪ್ರೊಹಿಬಿಷನ್ ಅನ್ನು ಜಾರಿಗೆ ತರಬೇಕು ಅನ್ನುವ ವಿಚಾರ ಅಲ್ಲ. ಟೋಟಲ್ ಆಗಿ ಇದನ್ನು ತರಬೇಕಾದರೆ ಅದನ್ನು ಯಾವಾಗ ತರಬೇಕು, ಯಾವ ರೀತಿಯಲ್ಲಿ ತರಬೇಕು ಅನ್ನುವುದನ್ನು ಯೋಚನೆ ಮಾಡಿ ಮಾಡಬೇಕು. ಈ ಕಾರಣದಿಂದ ಮಾನ್ಯ ಪ್ರಭಾಕರ್‌ರವರು ತಂದಿರತಕ್ಕಂಥಾ ಕೆಲವು ವಿಚಾರಗಳನ್ನು ಸಂಪೂರ್ಣವಾಗಿ ಒಪ್ಪಿದರೂ ಕೂಡ ಈ ಒಂದು ರೆಸಲ್ಯೂಷನ್ ಅನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಇದನ್ನು ಕೂಲಂಕೂಷವಾಗಿ ಪರಿಶೀಲನೆ ಮಾಡುತ್ತೇವೆ. ಎಂದು ಹೇಳಿದ್ದಾರೆ. ಅವರು ಇದನ್ನು ಎಷ್ಟು ದಿವಸದಲ್ಲಿ ಜಾರಿ ಮಾಡುತ್ತೇವೆ ಅಂತ ಒಂದು ಆಶ್ವಾಸನೆ ಕೊಟ್ಟರೆ ನಾನು ಇದರ ಬಗ್ಗೆ ಏನು ಮಾಡಬೇಕು ಅನ್ನುವುದನ್ನು ಹೇಳುವುದಕ್ಕೆ ತಯಾರಾಗಿದ್ದೇನೆ.

SRI S. M. YAHYA.—My view is very clear. There should be a national policy but not the State policy. Therefore it is not for us alone to decide in the matter, it is for the national leaders also to decide this matter.

ಶ್ರೀ ಕೆ. ಪ್ರಭಾಕರ್.—ಇದನ್ನು ಈಗ ಸಂಪೂರ್ಣವಾಗಿ ತರಲಾಗದಿದ್ದರೂ ಸತ್‌ಸಂಪ್ರದಾಯವಾಗಿ ಇದು ಬರುವಂತೆ ಪ್ರಯತ್ನಮಾಡಿ ಇದನ್ನು ಜಯಪ್ರದವನ್ನಾಗಿ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿರುವುದರಿಂದ ಈ ನಿರ್ಣಯವನ್ನು ನಾನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

MR. DEPUTY SPEAKER.—I thinks the House agrees for the withdrawal of the resolution.

Hon'ble Members : Yes

The resuolution was by eave withdrawn

MR. DEPUTY SPEAKER.—Next resolution Sri B.M. Horakeri, may be moved.

ಶ್ರೀ ಬಿ. ಎಂ. ಹೊರಕೇರಿ.—ಈ ಖಾಸಗಿ ನಿರ್ಣಯ ಏನು ಇದೆ ಇದರ ವಿಷಯವಾಗಿ 14ನೇ ಏಪ್ರಿಲ್‌ನಲ್ಲಿ ಈ ಸದನದಲ್ಲಿ ಕೂಲಂಕೂಷವಾಗಿ ಚರ್ಚಿಸಿದ್ದುದರಿಂದ ಈ ಪ್ರಸ್ತುತ ಸನ್ನಿವೇಶದಲ್ಲಿ ಈ ನಿರ್ಣಯವನ್ನು ಮಂಡಿಸಲು ನಾನು ಇಚ್ಚಿಸುವುದಿಲ್ಲ ಎಂದು ಹೇಳಬಯಸುತ್ತೇನೆ.

MR. DEPUTY SPEAKER.—The House will now stand adjourned and meet at 1-00 P.M on Monday.

The House adjourned at Twelve Minutes past Twelve of the Clock to meet again at One of the Clock on Monday, the 17th May 1976.

WD 4758—GPB—550—23-7-1976